# Rolls-Royce Motor Cars
Media Information

**ರಾಲ್ಸ್ ರಾಯ್ಸ್ ಮೋಟಾರ್ ಕಾರ್ಸ್**
**ಮಾಧ್ಯಮ ಮಾಹಿತಿ**

## ರಾಲ್ಸ್ ರಾಯ್ಸ್ ಡಾನ್ – ರಾಜಿಯಾಗದ ಡ್ರಾಪ್ ಹೆಡ್ ಆರಾಮ

8 ಸೆಪ್ಟೆಂಬರ್ 2015, ಗುಡ್‌ವುಡ್

*“ನಮ್ಮ ಹೊಸ ರಾಲ್ಸ್ ರಾಯ್ಸ್ ಡಾನ್, ಇದುವರೆಗೂ ಯಾವುದೇ ರಾಲ್ಸ್ ರಾಯ್ಸ್ ನೀಡದ, ಆಕರ್ಷಕ, ಮೋಹಕತೆಯನ್ನು ನೀಡುತ್ತದೆ ಮತ್ತು ತೆರೆದ ಛಾವಣಿಯ, ಅತಿ ಐಷಾರಾಮಿ ವಾಹನಗಳ ಹೊಸ ಯುಗವನ್ನು ಆರಂಭಿಸುತ್ತದೆ. ಡಾನ್ ಒಂದು ಸುಂದರ ಹೊಸ ಮೋಟಾರ್ ಕಾರ್ ಆಗಿದ್ದು, ವಿಶ್ವದಲ್ಲೇ ಸಾಟಿಯಿಲ್ಲದ ರಾಜಿಯಿಲ್ಲದೆ ತೆರೆದ ಛಾವಣಿಯ ವಾಹನದ ಅನುಭವವನ್ನು ನೀಡುತ್ತದೆ. ವಿಶ್ವದ ಬಹಲ ಪ್ರತ್ಯೇಕ ಸಾಮಾಜಿಕ ಕೇಂದ್ರಗಳಲ್ಲಿನ ಪ್ರಭೆಯಲ್ಲಿ ಮೀಯಲಿಚ್ಛಿಸುವವರಿಗೆ ಇದು ಅತಿ ಐಷಾರಾಮಿ ಡ್ರಾಪ್ ಹೆಡ್ ಮೋಟಾರ್ ಕಾರ್ ಗಳಲ್ಲಿ ಅತಿ ಸಾಮಾಜಿಕವಾಗಿದೆ.*

*ಸರಳವಾಗಿ, ಇದು ಎಂದಿಗೂ ರಚಿಸಲಾದ ಅತ್ಯಾಕರ್ಷಕ ರಾಲ್ಸ್ ರಾಯ್ಸ್.*

*ಪ್ರತಿ ಹೊಸ ದಿನವೂ ತರುವ ಹೊಚ್ಚಹೊಸ ಅವಕಾಶಗಳನ್ನು ‘ಡಾನ್’ ಎಂಬ ಪದವು ಉತ್ತಮವಾಗಿ ಸೂಚಿಸುತ್ತದೆ – ಒಂದು ಜಾಗೃತಿ, ನಮ್ಮ ಇಂದ್ರಿಯೆಗಳನ್ನು ತೆರೆದು, ಸೂರ್ಯಕಿರಣಗಳನ್ನು ಬರಮಾಡಿಕೊಳ್ಳುವುದು. ತನ್ನ ಅನಿಶ್ಚಿತ, ಅಪೂರ್ಣ, ನಿರೀಕ್ಷಣಾ ಅವಸ್ಥೆಯಲ್ಲಿ, ಡಾನ್ ಎಂಬುದು ರಾತ್ರಿಯ ಅಲೌಕಿಕ ಕತ್ತಲಿನಿಂದ ವಿಶ್ವವು ಬೆಳಕಿನೆಡೆಗೆ ಬರುವುದು. ಡಾನ್ ನ ಮುಂಜಾನೆಯ ಚಳಿಯು ತ್ವಚೆಗೆ ಒಂದು ಪ್ರಚೋದಕ ಪುಳಕವನ್ನು ನೀಡುತ್ತದೆ, ದಿನವು ಆರಂಭವಾಗುತ್ತಿದ್ದಂತೆ ನಮ್ಮ ಇಂದ್ರಿಯೆಗಳನ್ನು ಮತ್ತು ಉದ್ವೇಗವನ್ನು ಪ್ರೇರೇಪಿಸುತ್ತದೆ.*

*ಸ್ಪಿರಿಟ್ ಆಫ್ ಎಕ್ಸ್ಟಸಿಯ ಹಿಂದಿನ ಸ್ಫೂರ್ತಿ ಎಂದು ನಂಬಲಾಗಿರುವ ಎಲೆನಾರ್ ಥಾರ್ನ್ಟನ್ ನಂತೆ, ರಾಲ್ಸ್ ರಾಯ್ಸ್ ಡಾನ್ ದಿನದ ಆರಂಭದಲ್ಲಿ, ಏನಾದರೂ ಸಾಧ್ಯವಿದೆ ಎಂದು ತನ್ನ ಒಡೆಯನಿಗೆ ವಿಶ್ವಾಸ ನೀಡುವ ಕಲಾದೇವಿಯಾಗಿ ತನ್ನನ್ನು ತಾನು ನಿರೂಪಿಸುತ್ತದೆ.*

**ಟಾರ್ಸ್ಟೆನ್ ಮ್ಯುಎಲ್ಲರ್–ಓಟ್ವೋಸ್, ಪ್ರಧಾನ ಕಾರ್ಯಾಧಿಕಾರಿ, ರಾಲ್ಸ್ ರಾಯ್ಸ್ ಮೋಟಾರ್ ಕಾರ್ಸ್**

**ಪರಿಚಯ**

**"….ಹೆಚ್ಚು ಕಡಿಮೆ ಸರಿಯಿರುವ ಅಥವಾ ಪರ್ಯಾಪ್ತವಾದುದನ್ನು ಸ್ವೀಕರಿಸದಿರಿ."**

ರಾಲ್ಸ್ ರಾಯ್ಸ್ ನ ಕೋಶದಲ್ಲಿ ರಾಜು ಎಂಬ ಪದವು ಕಂಡುಬರುವುದಿಲ್ಲ. ಖಂಡಿತವಾಗಿ, ಈ ಸಂಸ್ಥೆಯು ಇದರ ಸಹ–ಸಂಸ್ಥಾಪಕರಾದ ಸರ್ ಎನ್ರಿ ರಾಯ್ಸ್ ಅವರ ಘೋಷಣೆಯನ್ನೇ ಅನುಸರಿಸುತ್ತಿದೆ – *ನೀವು ಮಾಡುವ ಎಲ್ಲದರಲ್ಲೂ ಉತ್ಕೃಷ್ಟತೆಗೆ ಶ್ರಮಿಸಿ. ಅತ್ಯುತ್ತಮವಾದುದನ್ನು ಮತ್ತೂ ಉತ್ತಮವಾಗಿಸಿ. ಅದಿಲ್ಲದಿದ್ದರೆ, ಅದನ್ನು ರಚಿಸಿ. ಹೆಚ್ಚುಕಡಿಮೆ ಸರಿಯಾದುದನ್ನು ಅಥವಾ ಪರ್ಯಾಪ್ತವಾದುದನ್ನೂ ಸ್ವೀಕರಿಸಬೇಡಿ.*

ಈ ಉಕ್ತಿಯ ಮೊದಲ ಭಾಗ – ನೀವು ಮಾಡುವ ಎಲ್ಲದರಲ್ಲೂ ಉತ್ಕೃಷ್ಟತೆಗೆ ಶ್ರಮಿಸಿ – ಸಂಸ್ಥೆಯ ಪ್ರತಿ ಕ್ರಮವನ್ನು ನಿರ್ದೇಶಿಸುತ್ತದೆ ಅದರಲ್ಲೂ ಹೊಸ ವಾಹನದ ಸೃಷ್ಟಿಯಲ್ಲಿ. ಎರಡನೇಯ ಭಾಗ – ಅತ್ಯುತ್ತಮವದುದನ್ನು ಮತ್ತೂ ಉತ್ತಮಗೊಳಿಸಿ – ಫ್ಯಾಂಟಂ ಸರಣಿ2 ಮತ್ತು ಘೋಸ್ಟ್ ಸರಣಿ2 ರ ಯಶಸ್ಸಿನಲ್ಲಿ ಸಾಬೀತಾಗಿದೆ ಏಕೆಂದರೆ ಇವೆರಡನ್ನೂ 2012 ಮತ್ತು 2014ರಲ್ಲಿ ಅನುಕ್ರಮವಾಗಿ ಜಾಗರೂಕವಾಗಿ ಆಧುನಿಕೀಕರಿಸಲಾಗಿತ್ತು. ಮತ್ತು ಒಬ್ಬ ಸಾಧಾರ ಪುರುಷನ ಗ್ರಾನ್ ಟುರಿಸ್ಮೊ ವಿಶ್ವದ ವೇದಿಕೆಗೆ ಮರಳಲು ಸಮಯ ಒದಗಿಬಂದಿದೆ ಎಂದು ರಾಲ್ಸ್ ರಾಯ್ಸ್ ತೀರ್ಮಾನಿಸಿದಾಗ, ಸರ್ ಎನ್ರಿ ಯವರ ಉಕ್ತಿಯ ಮೂರನೇ ಭಾಗವು ಮಾರ್ಗದರ್ಶನ ನೀಡಿತು — ಅದು ಇಲ್ಲದಿದ್ದರೆ, ಅದನ್ನು ಸೃಷ್ಟಿಸಿ.. ಹೀಗೆ ವ್ರೈತ್ ಹುಟ್ಟುಕೊಂಡಿತು.

ಈಗ, ಈ ಉಕ್ತಿಯ ಅಂತಿಮ ಭಾಗವು ರಾಲ್ಸ್ ರಾಯ್ಸ್ ನ ವಿನ್ಯಾಸ ಮತ್ತು ಇಂಜಿನಿಯರಿಂಗ್ ತಂಡಗಳಿಗೆ, ತೆರೆದ್ ಭಾವಣಿಯ, ಅತಿ ಐಷಾರಾಮಿ ವಾಹನದ ಹೊಸ ಯುಗಕ್ಕೆ ಬುನಾದಿ ಹಾಕುವಾಗ, ಮಾರ್ಗದರ್ಶನ ನೀಡಿವೆ. ಅತಿ ದೊಡ್ಡ ವಾಹನದ ರಾಜಿಗಳು ತುಂಬಿತುಳುಕಿದ್ದ ಕ್ಷೇತ್ರದಲ್ಲಿ — 2+2 ಸೀಟ್ ವಿನ್ಯಾಸ — ರಾಲ್ಸ್ ರಾಯ್ಸ್ 'ಹೆಚ್ಚು ಕಡಿಮೆ ಸರಿಯಿರುವ ಅಥವಾ ಪರ್ಯಾಪ್ತವಾದುದನ್ನು ಸ್ವೀಕರಿಸದಿರಿ' ಎಂಬುದನ್ನು ಆಯ್ದುಕೊಂಡಿದೆ.

ಹೀಗೆ, ವಿಶ್ವದ ಏಕೈಕ ನೈಜ ಆಧುನಿಕ ನಾಲ್ಕು ಸೀಟ್ ನ ಅತಿ ಐಷಾರಾಮಿ ಡ್ರಾಪ್ ಹೆಡ್, ರಾಲ್ಸ್ ರಾಯ್ಸ್ ಡಾನ್ ಹುಟ್ಟಿಕೊಂಡಿದೆ.

**"ಬೆಳಗಾಗುವ ಕೊಂಚ ಮುಂಚೆಯೇ ಬಹಳ ಕತ್ತಲಾಗಿರುತ್ತದೆ".**

ಬಹಳ ಕಷ್ಟಕರವಾದ ಸಮಯದಲ್ಲಿ, 'ಬೆಳಗಾಗುವ ಕೊಂಚ ಮುಂಚೆಯೇ ಬಹಳ ಕತ್ತಲಾಗಿರುತ್ತದೆ.' ಎಂಬ ಮಾತು – ಇದನ್ನು ಮೊದಲ ಹೇಳಿದ್ದು ಆಂಗ್ಲ ಜೀರ್ಣೋದ್ಧಾರ ಬೋಧಕರಾದ ಥಾಮಸ್ ಫುಲ್ಲರ್ – ಆಶಾಭಾವನೆಯ ಕಿರಣವಾಗಿ ಹೊಮ್ಮುತ್ತದೆ. ಈ ಬೆಳಗಿನ ಜಾವದ ಕತ್ತಲನ್ನು, ಭೂತ ಪ್ರೇತಗಳ ಗೋಚರಕಾಲದಲ್ಲಿ, ಮತ್ತು ಒಬ್ಬರ ಆತಂಕಗಳು ಅಡಗಿರುವಾಗ, ಬೆಳಗಿನ ಸೂರ್ಯಕಿರಣದ ಶಕ್ತಿಯು ಓಡಿಸಿ, ಹೊಸ ಬೆಳಗಿಗೆ ಏಳುತ್ತಾ ಮತ್ತು ಹೊಸ ದಿನದ ಕೊನೆಯಿಲ್ಲದ ಸಾಧ್ಯತೆಗಳನ್ನು ತೆರೆಯುತ್ತದೆ.

1952ರಲ್ಲಿ ದೀರ್ಘಕಾಲದ ಯುದ್ಧದಿಂದ ಉಂಟಾದ ಆರ್ಥಿಕ ಸರಳತೆಯಿಂದ ವಿಶ್ವವು ಕೊನೆಗೂ ಹೊರಬರುತ್ತಿದ್ದ ಕಾಲದಲ್ಲಿ ಈ ರೀತಿಯ ಭಾವನೆಗಳು ಜನರಲ್ಲಿದ್ದವು. ಆ ವರ್ಷ, ವಿಶ್ವದ ಮೊದಲ ಯಾತ್ರಿಕರ ವಿಮಾನವಾದ ಬ್ರಿಟಿಶ್ ಡೆಹ್ಯಾವಿಲ್ಲಾಂಡ್, ಕಾಮೆಟ್ ತನ್ನ ಚೊಚ್ಚಲ ವಾಣಿಜ್ಯ ಹಾರಾಟ ಮಾಡುತ್ತಿದ್ದಂತೆ, ವಿಶ್ವವು ಆಶಾಭಾವನೆಯಿಂದ ಬಹವಿಷ್ಯದೆಡೆಗೆ ನೋಡಿತು; ಬ್ರಹ್ಮಾಂಡದ ಸೃಷ್ಟಿಯ ಬಗ್ಗೆ ಬಿಗ್ ಬ್ಯಾಂಗ್ ಸೂತ್ರವನ್ನು ಮೊದಲು ಪ್ರಸ್ತಾಪಿಸಲಾಯಿತು; ಮತ್ತು ರಾಣಿ ಎಲಿಜ಼ಬೆತ್ 2 ಯುನೈಟೆಡ್ ಕಿಂಗ್ಡಂ ನ ಸಿಂಹಾಸನವನ್ನೇರಿದರು.

ಅದೇ ಇಸವಿಯಲ್ಲಿ, ಹೊಸ ರಾಲ್ಸ್ ರಾಯ್ಸ್ ಸಿಲ್ವರ್ ಡಾನ್ ನ ವಿನ್ಯಾಸಕಾರರಿಗೆ ಕಲಾದೇವತೆಯಾದ ಮೂಲ ರಾಲ್ಸ್ ರಾಯ್ಸ್ ಸಿಲ್ವರ್ ಡಾನ್ ಡ್ರಾಪ್ ಹೆಡ್ ಅನ್ನು ರಾಲ್ಸ್ ರಾಯ್ಸ್ ಕೋಚ್ ನಿರ್ಮಾಣಕಾರರಾದ ಪಾರ್ಕ್

ವಾರ್ಡ್ ಅನ್ನು ಪೂರ್ಣಗೊಳಿಸಿ, ಅದರ ಮೊದಲ ಗ್ರಾಹಕರಾದ ಕೆನಡಾದ ಕರ್ನಲ್ ಫಾಂ. ಫಿಲಿಪ್ಸ್ ಅವರಿಗೆ ನೀಡಲಾಯಿತು.

ಆ ಸಮಯದಲ್ಲಿ ಹೊಸ ಆರಂಭವಾಗಿದ್ದ ರಾಲ್ಸ್ ರಾಯ್ಸ್ ಗೆ, ಮೂಲ ಸಿಲ್ವರ್ ಡಾನ್ ಕಾರ್ಖಾನೆಯಲ್ಲಿ ನಿರ್ಮಿಸಲಾದ ದೇಹದೊಂದಿಗೆ ನೀಡಲಾದ ಮೊದಲ ರಾಲ್ಸ್ ರಾಯ್ಸ್ ಕಾರ್ ಆಗಿತ್ತು. ಆದರೆ, ಸಿಲ್ವರ್ ಡಾನ್ ಎಂಬ ಹೆಸರಿದ್ದ ಡ್ರಾಪ್ ಹೆಡ್ ರಾಲ್ಸ್ ರಾಯ್ಸ್ ಪ್ರತ್ಯೇಕ ಗ್ರಾಹಕರಿಗೆ ಕೋಚ್ ನಿರ್ಮಾಣ ಮುಂದುವರೆದಿತ್ತು, ಮತ್ತು ಇದರಿಂದ ಅದರ ಅನನ್ಯತೆ ಮತ್ತು ವಿರಳತೆಯ ಖಾತ್ರಿಯಾಗಿತ್ತು ಮತ್ತು ಜನರು ಜೀವನವನ್ನು ಆನಂದಿಸಿ, ಲಾ ಡೋಲ್ಸೆ ವೀಟಾ ವನ್ನು ಬೆನ್ನತಿದಾಗ ಆ ಯುಗದ ಆಶಾಭಾವನೆಯನ್ನು ಸಾಕಾರವಾಗಿಸಿತು.

ಈ ಪ್ರಖ್ಯಾತವಾದ ಮತ್ತು ವಿರಳವಾದ ರಾಲ್ಸ್ ರಾಯ್ಸ್ ಹೆಸರನ್ನು 1950ರಿಂದ 1954ರವರೆಗೆ ಕೇವಲ 28 ಬಹಳ ವಿಶೇಷವಾದ ಡ್ರಾಪ್ ಹೆಡ್ ದೇಹಗಳಿಗೆ ಮಾತ್ರವೇ ಬಳಸಲಾಗಿತ್ತು.

ರಾಲ್ಸ್ ರಾಯ್ಸ್ ನ ಹೊಸ ಡಾನ್ ಸಿಲ್ವರ್ ಡಾನ್ ನಿಂದ ಸ್ಫೂರ್ತಿಯನ್ನು ಪಡೆದಿದ್ದು, ಅತಿ ಐಷಾರಾಮಿ ವಾಹನಗಳಲ್ಲಿ ವಿಶ್ವದ ಮೊತ್ತ ಮೊದಲದನೇಯದನ್ನು ನೀಡಿದೆ – 2015ರಲ್ಲಿ ಅತಿ ಐಷಾರಾಮಿ ನಾಲ್ಕು ಆಸನಗಳ ಕನ್ವರ್ಟಿಬಲ್ ವಾಹನದ ಆಕರ್ಷಕ, ಸಮಕಾಲೀನ ವ್ಯಾಖ್ಯಾನ – ವಿರಳವಾದ, ಸುಸಂಸ್ಕೃತ, ಮತ್ತು ಬಹಳ ಸಾಮಾಜಿಕವಾಗಿರುವ ಅತಿ ಐಷಾರಾಮಿ ವಾಹನ.

1952 ಸಿಲ್ವರ್ ಡಾನ್ ಡ್ರಾಪ್ ಹೆಡ್ ನಂತೆಯೇ, ಹೊಸ ರಾಲ್ಸ್ ರಾಯ್ಸ್ ಡಾನ್ ತನ್ನ ಸಂಗಾತಿಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ; ಇದು 80% ಅನನ್ಯ ದೇಹದ ಭಾಗಗಳನ್ನು ಹೊಂದಿದೆ.

ಈ ಅದ್ಭುತವಾದ ಅತಿ ಐಷಾರಾಮಿ ವಾಹನವು ತನ್ನ ವಚನಗಳನ್ನು ಪೂರೈಸುವಂತೆ ಎಷ್ಟು ಗಮನ ನೀಡಲಾಗಿದೆ ಎಂದರೆ, ಹೊಸ ರಾಲ್ಸ್ ರಾಯ್ಸ್ ಡಾನ್ ಅನ್ನು ರಸ್ತೆಗೆ ತೇಲಿಸಿ ಮುಟ್ಟಿಸುವ ಟೈರ್ ಗಳನ್ನು, ಗುಡ್ವುಡ್ ನಲ್ಲಿ ರಾಲ್ಸ್ ರಾಯ್ಸ್ ನ ದಿ ಹೋಂ ಅನ್ನು ಅಗಲುವ ಪ್ರತಿ ರಾಲ್ಸ್ ರಾಯ್ಸ್ ನಿಂದ ನಿರೀಕ್ಷಿಸಲಾಗುವ, ಪರಾಕಾಷ್ಠೆಯ ಮ್ಯಾಜಿಕ್ ಕಾರ್ಪೆಟ್ ನ ಅನುಭವ ನೀಡುವಂತೆ,  ವಿಶೇಷವಾಗಿ ರಚಿಸಲಾಗಿದೆ.

ಮತ್ತು, ಡಾನ್ ನ ತಾರಸಿಯನ್ನು ಸೃಷ್ಟಿಸುವಲ್ಲಿ ವಿಶೇಷವಾದ ಇಂಜಿನಿಯರಿಂಗ್ ಮತ್ತು ಉತ್ಪಾದನೆಗೆ ಗಮನ ನೀಡಲಾಗಿದೆ. ಆಧುನಿಕ ವಾಹನ ಉದ್ಯಮದಲ್ಲಿ ಇದುವರೆಗೂ ಕಂಡುಕೇಳಿರದಂತೆ, ರಾಲ್ಸ್ ರಾಯ್ಸ್ ಡಾನ್ ನ ತಾರಸಿಯು ತೆರೆದಿದ್ದಾಗ ವ್ರೈತ್ ನ ನಿಶ್ಶಬ್ದತೆಯನ್ನು ನೀಡುತ್ತದೆ ಮತ್ತು 50 kph ವೇಗದಲ್ಲಿ ಓಡುವಾಗಲೂ ಕೇವಲ 20 ಸೆಕೆಂಡ್ ಗಳಲ್ಲಿ ಪೂರ್ಣ ನಿಶ್ಶಬ್ದವಾಗಿ ಕಾರ್ಯನಿರ್ವಹಿಸುತ್ತದೆ.

ರಾಲ್ಸ್ ರಾಯ್ಸ್ ಡಾನ್ ಇದುವರೆಗೂ ತಯಾರಿಸಲಾದ ಅತಿ ನಿಶ್ಶಬ್ದವಾದ ತೆರೆದ ತಾರಸಿ ಕಾರ್ ಎಂದು ಖಂಡಿತವಾಗಿಯೂ ಹೇಳಬಹುದು.

**ವಿನ್ಯಾಸ**

**2+2 $\neq$ 4**

ರಾಲ್ಸ್ ರಾಯ್ಸ್ ನ ಪ್ರಪಂಚದಲ್ಲಿ ದೈನಂದಿನ ಗಣಿತದ ನಿಯಮಗಳು ಯಾವಾಗಲೂ ಅನ್ವಯವಾಗುವುದಿಲ್ಲ. ಆದ್ದರಿಂದಲೇ ನಾನು ಹೇಳುತ್ತೇನೆ, ಹೊಸ ರಾಲ್ಸ್ ರಾಯ್ಸ್ ಡಾನ್ ನ ವಿಷಯದಲ್ಲಿ 2+2 4 ಕ್ಕೆ ಸಮನಾಗುವುದಿಲ್ಲ.

Rolls-Royce Motor Cars

The Drive, Westhampnett, Chichester, West Sussex PO18 0SH
Telephone +44 (0)1243 384000
www.press.rolls-roycemotorcars.com

**ಗೈಲ್ಸ್ ಟೇಲರ್, ವಿನ್ಯಾಸದ ನಿರ್ದೇಶಕರು, ರಾಲ್ಸ್ ರಾಯ್ಸ್ ಮೋಟಾರ್ ಕಾರ್ಸ್**
ತೆರೆದ ತಾರಸಿ ಮೋಟಾರ್ ಕಾರ್ ಕ್ಷೇತ್ರವನ್ನು ಅಧ್ಯಯನ ಮಾಡುತ್ತಾ, ಅದರಲ್ಲೂ ಅದರ ಉನ್ನತ ಮೌಲ್ಯದ ಐಷಾರಾಮಿ ಸ್ಥಾನವನ್ನು ನೋಡಿ, ಗ್ರಾಹಕರಿಗೆ ಮೋಸವಾಗುತ್ತಿದೆ ಎಂಬುದು ರಾಲ್ಸ್ ರಾಯ್ಸ್ ವಿನ್ಯಾಸಕಾರರಿಗೆ ಸ್ಪಷ್ಟವಾಗಿತ್ತು. ಒಂದು ನಿರ್ದಿಷ್ಟ ಮಾದರಿಯಾದ 2+2 ಸೆಟಪ್ ಮೇಲೆ ಸಮೀಪದೃಷ್ಟಿಯ ಗಮನವು, ರಾಲ್ಸ್ ರಾಯ್ಸ್ ನ ಪ್ರಕಾರ, ಒಂದು ರಾಜಿಯಾಗಿತ್ತು.

ಸಾಮಾನ್ಯವಾಗಿ ತಿಳಿದಂತೆ, 2+2 ಎಂಬ ಮಾದರಿಯಲ್ಲಿ ಮುಂಭಾಗದಲ್ಲಿ ಚಾಲಕರಿಗೆ ಮತ್ತು ಒಬ್ಬ ಪ್ರಯಾಣಿಕರಿಗೆ ಎರಡು ಆಸನಗಳು ಮತ್ತು ಹಿಂಬದಿಯಲ್ಲಿ ಆಗಾಗ ಬರುವ ಪ್ರಯಾಣಿಕರಿಗೆ ಅಥವಾ ಮಕ್ಕಳಿಗೆ ಎರಡು ಸಣ್ಣ ಆಸನಗಳಿರುತ್ತವೆ. ಹಿಂಬದಿಯಲ್ಲಿ ಉದ್ದನೆಯ ಕಾಲಿನ ಸ್ಥಳ ಇಲ್ಲದಿರುವುದು ಸಹಜವಾಗಿದ್ದು, ಇದು ವಾಹನದ ಆರಾಮ ಮತ್ತು ಉಪಯೋಗವನ್ನು ಕುಂದಿಸುತ್ತದೆ. ಕನ್ವರ್ಟಿಬಲ್ ದೇಹದ ಮಾದರಿಯಲ್ಲಿ, ಸಾಮಾನ್ಯವಾಗಿ ಸ್ಥಳದಲ್ಲಿನ ಕೊರತೆಗೆ ಕಾರಣ ಕನ್ವರ್ಟಿಬಲ್ ತಾರಸಿಯನ್ನು ಬೂಟ್ ಮತ್ತು ಹಿಂಬದಿ ಯಾತ್ರಿಕರ ಜಾಗದೊಂದಿಗೆ ಹೊಂದಿಸುಲು ಉತ್ಪಾದಕರು ಅಸಮರ್ಥರಾಗಿರುತ್ತಾರೆ. ಇದರ ಫಲವಾಗಿ ಕೇವಲ ತೆರೆದ ತಾರಸಿ ಕಾರ್ ಗಳಿಂದ ತುಂಬಿರುವ ಒಂಶ್ ಕ್ಷೇತ್ರವಾಗಿದ್ದು, ಇದನ್ನು ರಾಲ್ಸ್ ರಾಯ್ಸ್ ರಾಜಿಯಾದದ್ದು ಮತ್ತು 'ಸಮಾಜ ವಿರೋಧಿ' ಎಂದು ಪರಿಗಣಿಸುತ್ತದೆ.

ರಾಲ್ಸ್ ರಾಯ್ಸ್ ನಲ್ಲಿ ನಮ್ಮನ್ನು ನಾವು, ಸಾಮಾಜಿಕ ತಾಣಗಳಾಗಿಯೂ ಆಗಿರಬಲ್ಲ ಉತ್ತಮ ಮೋಟಾರ್ ವಾಹನಗಳ ಸೃಷ್ಟಿಕರ್ತರು ಎಂದು ಹೆಮ್ಮೆಯಿಂದ ತಿಳಿದಿದ್ದೇವೆ. ಎನ್ನುತ್ತಾರೆ ಟೇಲರ್. ದಿನ ಬಿಟ್ಟು ದಿನ ಕೇವಲ ಇಬ್ಬರು ವಯಸ್ಕರರು ಮಾತ್ರ ಆರಾಮವಾಗಿ ಬಳಸಬಲ್ಲ ಡಾನ್ ನಂತಹ ಕಾರ್ ಅನ್ನು ಸೃಷ್ಟಿಸುವ ಕಲ್ಪನೆ ನಮಗೆ ಅಸಹ್ಯವಾಗಿದೆ. ಡಾನ್ ಅನ್ನು ಸೃಷ್ಟಿಸುವಲ್ಲಿ, ನಾಲ್ಕು ವಯಸ್ಕರರು ಒಟ್ಟಿಗೆ ಶೈಲಿಯ ಪರಾಕಾಷ್ಠೆಯಲ್ಲಿ ಪ್ರಯಾಣಿಸುವ ಆರಾಮ ಮತ್ತು ಅನಂದಕ್ಕೆ ಯಾವುದೇ ರಾಜಿಯನ್ನು ನಾವು ಒಪ್ಪಿಕೊಂಡಿಲ್ಲ.

**ಒಂದು ಆಕರ್ಷಕ, ವ್ಯಾಮೋಹಕ ಭೇಟಿ**

ಡಾನ್ ಎಂಬುದು  ರೂಟ್ ನೆಪೊಲಿಯನ್ ನಲ್ಲಿ ಆರಾಮವಾಗಿ ಇರಬಲ್ಲ ಒಂದು ರಾಲ್ಸ್ ರಾಯ್ಸ್. ಕೋಟ್ ಡಿ ಅಜ್ಹೂರ್ ನಲ್ಲಿ ಜೀವನಕ್ಕೆ ಸಮಕಾಲೀನ ಗೌರವ ಸೂಚಿಸುತ್ತದೆ. ಕ್ಯಾಸಿನೊ ಜೀವನಶೈಲಿಗೆ ಇದು ಸಮಕಾಲೀನ ಉತ್ತರವಾಗಿದೆ. ಗುಣದಲ್ಲಿ ಯೋಧನಂತಿರುವ ಇದು ಸ್ವಾತಂತ್ರ್ಯ ಮತ್ತು ಶ್ರೇಷ್ಟತೆಯನ್ನು ಆನಂದಿಸುವ ಜನರನ್ನು ಆಕರ್ಷಿಸುವ ಉದ್ದೇಶ ಹೊಂದಿದೆ ಎನ್ನುತ್ತಾರೆ ಗೈಲ್ಸ್ ಟೇಲರ್, ವಿನ್ಯಾಸದ ನಿರ್ದೇಶಕರು.

ರಾಲ್ಸ್ ರಾಯ್ಸ್ ನಲ್ಲಿ ನಾವು ಯಾವುದೇ ರಾಜಿಯಿಲ್ಲದೆ ವಿನ್ಯಾಸ ಮಾಡುತ್ತೇವೆ, ಮತ್ತು ಈ ರಾಜಿಯಿಲ್ಲದ ಮಾರ್ಗದಲ್ಲಿ ಪ್ರತಿ ಮೋಟಾರ್ ಕಾರ್ ಗೂ ಹೊಸ ಸವಾಲುಗಳು ಉದುರಾಗುತ್ತವೆ. ಹೊಸ ರಾಲ್ಸ್ ರಾಯ್ಸ್ ಡಾನ್ ನ ವಿಷಯದಲ್ಲಿ, ನಾವು ಕೆಳಗಿನಿಂದ ಇದನ್ನು ವಿನ್ಯಾಸಗೊಳಿಸಿ, ಆಕರ್ಷಕ. ಮೋಹಕ ನೋಟವನ್ನು ನೀಡಿದ್ದೇವೆ.

ನೋಡುಗರನ್ನು ಹೊಸ ರಾಲ್ಸ್ ರಾಯ್ಸ್ ಡಾನ್ ಆಕರ್ಷಕ ಆದರೂ ಉತ್ಕೃಷ್ಟ ಹೊರ ವಿನ್ಯಾಸದಿಂದ ರಾಲ್ಸ್ ರಾಯ್ಸ್ ನ ಸಾಂಪ್ರದಾಯಿಕ ನೋಟ ಮತ್ತು ಉಪಸ್ಥಿತಿಯಿಂದ ಸ್ವಾಗತಿಸುತ್ತದೆ. ಇದು ಅತಿ ರೋಮಾಂಚಕ ರಾಲ್ಸ್ ರಾಯ್ಸ್ ನಂತೆ ಆದರೆ ಹೊಸ ಮಟ್ಟದ ಕೈಚಳಕ, ಪ್ರಬುದ್ಧತೆ ಮತ್ತು ಸುಸಂಸ್ಕೃತಿಯನ್ನು ತರುವ ಆಕರ್ಷಕ ಮತ್ತು ಮೋಹಕ ಗುಣಗಳನ್ನು ಡ್ರಪ್ ಹೆಡ್ ಕೂಪೆಯಲ್ಲಿ ತಂದಿದೆ – ರಾಜಿಯಿಲ್ಲದ ಸ್ವಾತಂತ್ರ್ಯದ ಪ್ರಶಾಂತ ಆದರೂ ಆಹ್ಲಾದಕರ ಅನುಭವ.

Rolls-Royce Motor Cars
The Drive, Westhampnett, Chichester, West Sussex PO18 0SH
Telephone +44 (0)1243 384000
www.press.rolls-roycemotorcars.com

ಇದು ಹೊಸ ಮಟ್ಟದ ಶ್ರಮವಿಲ್ಲದ ಮತ್ತು ಅರಾಮವಾದ ಅನುಭವವನ್ನು, ಜೊತೆಗೆ ಆಹ್ಲಾದ ಮತ್ತು ಚೈತನ್ಯವನ್ನು ತರುತ್ತದೆ. ಇದೆಲ್ಲವೂ ಆರಾಮ ಮತ್ತು ಸ್ಥಳದಲ್ಲಿ ಯಾವುದೇ ರಾಜಿಯಿಲ್ಲದೆ ಲಭ್ಯವಾಗಿದೆ. ಈ ಹೊಸ ರಾಲ್ಸ್ ರಾಯ್ಸ್ ಚೈತನ್ಯದ ಮತ್ತು ಸಾಮಾಜಿಕ ಗುಣಗಳನ್ನು ಮೇಳವಿಸಿ, ವಿಶ್ವಾದ್ಯಂತ ವಿಶಾಲವಾದ, ಯುವಪೀಳಿಗೆಯ ಮತ್ತು ಹೆಚ್ಚು ಸಮಾಜಿಕ ಜಾಗೃತಿಯ ವೀಕ್ಷಕರನ್ನು ಆಕರ್ಷಿಸುತ್ತದೆ.

ಮಾಧ್ಯಮದ ಊಹೆಗಳಿಗೆ ವಿರುದ್ಧವಾಗಿ, ಈ ಹೊಸ ರಾಲ್ಸ್ ರಾಯ್ಸ್ ಡಾನ್ ವ್ರೈತ್ ಡ್ರಾಪ್ ಹೆಡ್ ಅಲ್ಲ. ರಾಲ್ಸ್ ರಾಯ್ಸ್ ನ ವಿನ್ಯಾಸದ ಭಾಷೆಯ ವಿಕಸನ ಮತ್ತು ಉನ್ನತವಾದ ಸಮಕಾಲೀನ, ನಾಲ್ಕು ಆಸನದ ಐಷಾರಾಮಿ ಡ್ರಾಪ್ ಹೆಡ್ ವಿನ್ಯಾಸವನ್ನು ಸೇರಿಸಿಕೊಳ್ಳಲು ಹೊಸ ಡಾನ್ ನ 80% ರಷ್ಟು ಹೊರ ಮೈ ಪ್ಯಾನಲ್ ಗಳನ್ನು ಹೊಸದಾಗಿ ವಿನ್ಯಾಸಗೊಳಿಸಲಾಗಿದೆ.

ಇದರ ಗುರಿ ಸ್ಪಷ್ಟವಾಗಿದೆ. ಇದುವರೆಗೂ ಮತ್ಯಾವ ಕಾರ್ ಉತ್ಪಾದಕರೂ ಮಾಡಲಾಗದ್ದನ್ನು ಸಾಧಿಸಲು – ತನ್ನ ತಾರಸಿಯನ್ನು ತೆಗೆದಿರುವಾಗ ಸುಂದರವಾಗಿ ಕಾಣುವಂತೆ ತಾರಸಿಯನ್ನು ಇಳಿಸಿದಾಗಲೂ ಸುಂದರವಾಗಿ ಕಾಣುವ ಕಾರ್ ಅನ್ನು ತಯಾರಿಸಲು. ವಿನ್ಯಾಸದ ತಂಡದ ಬಿಡುವಿಲ್ಲದ ಶ್ರಮಗಳ ಫಲಿತಾಂಶವು ಹೊಸ ರಾಲ್ಸ್ ರಾಯ್ಸ್ ಡಾನ್ ಅನ್ನು ಒಂದು ಕಾರ್ ನಲ್ಲಿ ಎರಡನ್ನು ಮಾಡುವುದು ಎಂದು ನಾವು ಹೇಳಬಹುದು.

**ಹೊರಾಂಗಣ ವಿನ್ಯಾಸ**

ರಾಲ್ಸ್ ರಾಯ್ಸ್ ಡಾನ್ ಸಮಯಾತೀತವಾದ ರಾಲ್ಸ್ ರಾಯ್ಸ್ ವಿನ್ಯಾಸದ ನೀತಿಗಳನ್ನು ನಿರ್ವಹಿಸಿದೆ – 2:1 ಗಾಲಿಯ ಎತ್ತರಕ್ಕೆ ದೇಹದ ಎತ್ತರ, ಉದ್ದನೆಯ ಬನ್ನೆಟ್, ಚಿಕ್ಕ ಮುಂದಿನ ಓವರ್ ಹ್ಯಾಂಗ್, ಉದ್ದನೆಯ ಹಿಂಬದಿ ಓವರ್ ಹ್ಯಾಂಗ್, ನಾಜೂಕಾದ ಬಾಗಿದ ಹಿಂಬದಿ ಗ್ರಾಫಿಕ್ ಮತ್ತು ಉನ್ನತ ಭುಜರೇಖೆ.

ಈ ಎಲ್ಲಾ ಸಂಪ್ರದಾಯವನ್ನು ಸುಂದರವಾದ ಮತ್ತು ಪೂರ್ಣ ಸಮಕಾಲೀನ ವಿನ್ಯಾಸದಲ್ಲಿ ನೀಡಲಾಗಿದೆ.

ಒಬ್ಬ ಓಟಗಾರನಂತೆ, ರಾಲ್ಸ್ ರಾಯ್ಸ್ ಡಾನ್ ಸಮಚಿತ್ತವಾಗಿ, ತರಬೇತುಪಡೆದಂತೆ, ಹೋಗಲು ಸಿದ್ಧವಾದಂತೆ ಕಾಣುತ್ತದೆ, ಮೇಲ್ಮೈಯಲ್ಲಿ ಸುಪ್ತ ವೇಗವರ್ಧನೆ ಮತ್ತು ಟೆನ್ಶನ್ ಗಳನ್ನು, ವಕ್ರತೆಯನ್ನು ಸೂಚಿಸುವ ಹೊಸ ಪ್ಯಾನೆಲ್ ಗಳು, ಬಿಗಿಯಾದ ಮೇಲ್ಮೈ ಸೃಷ್ಟಿಸಿ, ಮತ್ತು ಕೆಳಗೆ ಏನಿರಬಹುದು ಎಂದು ಸೂಚಿಸುವ ಶಕ್ತಿಶಾಲಿ ಛಾಯೆಯು, ವರ್ಧಿಸುತ್ತದೆ.

ಡಾನ್ ನ ಶಕ್ತಿಶಾಲಿ ಮತ್ತು ಆಕರ್ಷಕ ಮುಂಭಾಗವು ಅದಕ್ಕೆ ನಯವಾದ ಆದರೂ ಚೂಪಾದ, ಪುರುಷನ ನೋಟ ನೀಡಿ, ಬಲವಾದ ಆವರಿಸುವ ಭುಜದ ರೇಖೆಯು ಹಿಂಗಾಲಿಗಳ ಸುತ್ತ ಹರಿಯುವಾಗ ಹೆಚ್ಚು ಸುಂದರವಾಗುತ್ತದೆ. ಬಾನೆಟ್ ಮೇಲೆ ಚೂಪಾದ ವೇಕ್ ಚ್ಯಾನೆಲ್, ಸ್ಪಿರಿಟ್ ಆಫ್ ಎಕ್ಸ್ಟಸಿ ಯ ರೆಕ್ಕೆಗಳಿಂದ ಹೊಮ್ಮಿದ್ದು, ವಿಮಾನದ ಆವಿಯ ಬಾಲದ ನೋಟವನ್ನು ಸೂಚಿಸಿದ್ದು, ಕಾರ್ ನ ಚೇತನಶೀಲತೆಯನ್ನು ಸೂಚಿಸುತ್ತದೆ. ತನ್ನ ಉನ್ನತ ಭುಜದರೇಖೆ, ಅಗಾಧವಾದ ಸಿ ಪಿಲ್ಲರ್ ಮತ್ತು ಅಡ್ಡವಾಗಿ ಇಕ್ಕಟ್ಟಾದ ಪಕ್ಕದ ಕಿಟಕಿಯ ಕಿಂಡಿಯು, ಪಕ್ಕದಿಂದ ಮತ್ತು ತಾರಸಿಯಿಂದ ನೋಡಿದಾಗ, ಈ ಕಾರು ಕೆಳಗೆ ತೇಲಿಸಲಾದ ಹಾಟ್ ರಾಡ್ ನಂತೆ ಕಾಣುತ್ತದೆ.

ಮುಂಭಾಗದಲ್ಲಿ, ಗ್ರಿಲ್ ಅನ್ನು ಸುಮಾರು 45 ಟಟು ಗಳಷ್ಟು ಹಿಂದುಗಡೆ ಇಡಲಾಗಿದೆ;ಮತ್ತು ಕೆಳಗಿನ ಮುಂಭಾಗದ ಬಂಪರ್ ಅನ್ನು 53 ಟಟು ನಂಷ್ಟು ವಿಸ್ತರಿಸಲಾಗಿದೆ, ವ್ರೈತ್ ಗೆ ಹೋಲಿಸಿದಂತೆ. ಜೆಟ್ ಗಾಳಿಯನ್ನು ಹೀರಿಕೊಳ್ಳುವ ಕೋನಕ್ಕೆ ದೃಷ್ಟಿಯನ್ನು ಕೇಂದ್ರೀಕರಿಸಲು ಹೀಗೆ ಮಾಡಲಾಗಿದೆ ಮತ್ತು ಕಾರ್ ಅನ್ನು ಕೇಂದ್ರೀಕರಿಸಲು ಮಾಡಲಾಗಿದೆ, ಕಾರ್ ನಿಂತಿದ್ದಾಗಲೂ. ಗ್ರಿಲ್ ನ ವಿನ್ಯಾಸವು ಕಾರ್ ನ ಟೆನ್ಶನ್ ಅನ್ನು ಹಿಂಬದಿ ಭುಜಗಳಿಗೆ ವೇಗವರ್ಧಿಸಲು ಸಹಾಯಕವಾಗಿದೆ, ಇದು ಡಾನ್ ನ ಅನನ್ಯ ಸುಸಂಸ್ಕೃತಿಯನ್ನು ಸೂಚಿಸುತ್ತದೆ.

Rolls-Royce Motor Cars

The Drive, Westhampnett, Chichester, West Sussex PO18 0SH
Telephone +44 (0)1243 384000
www.press.rolls-roycemotorcars.com

ಗ್ರಿಲ್ ಮತ್ತು ಬಂಪರ್ ಕಾರ್ ನ ಅಡ್ಡ ರೇಖೆಗಳ ಮೇಲೆ ಕೇಂದ್ರೀಕರಿಸುತ್ತದೆ; ರಾಲ್ಸ್ ರಾಯ್ಸ್ ಕುಟುಂಬದ ಇತರ ಸದಸ್ಯರಲ್ಲಿ ಇವು ಸಾಂಪ್ರದಾಯಿಕ ಉದ್ದ ರೇಖೆಗಳ ಮೇಲೆ ಕೇಂದ್ರೀಕರಿಸುತ್ತದೆ. ಬಂಪರ್ ಈಗ ಸಂಖ್ಯಾ ಹಲಗೆಯನ್ನು ಹೊಂದಿದ್ದು, ಹೊಸ ಕೇಂದ್ರೀಕೃತ ಕೆಳಗಿನ ವಾಯು ಕಟ್ಟೆಯನ್ನು ಹೊಂದಿದೆ. ಕೆಳಗಿನ ವ್ಯಾಲೆನ್ಸ್ ನಲ್ಲಿ ಮೆಶ್ ಅನ್ನು ಹಿಂದೆ ಹಾಕಲಾಗಿದ್ದು, ಕಪ್ಪು ಬಣ್ಣದಲ್ಲಿ ಮಾಡಲಾಗಿದೆ; ಇದು ಆಳದ ಅನುಭವ ನೀಡಿದ್ದು, ಗ್ರಿಲ್ ನ ಆಳಕ್ಕೆ ಪೂರಕವಾಗಿದೆ. ಇದರ ಜೊತೆಗೆ, ಕ್ರೋಂ ಬ್ಲೇಡ್ ಗಳು ಕಾರ್ ಗೆ ಉನ್ನತ ರೂಪ ನೀಡುವುದರ ಜೊತೆಗೆ, ಅಡ್ಡ ರೇಖೆಗಳಿಗೆ ಪೂರಕವಾಗಿವೆ, ಮತ್ತು ಕಾರ್ ನ ಸುತ್ತ ಕಣ್ಣಿನ ಹರಿವನ್ನು ವರ್ಧಿಸುತ್ತದೆಲ್ ಇದರಿಂದ ಶಕ್ತಿ ಮತ್ತು ವೈಶಾಲ್ಯದ ಭಾವನೆ ನೀಡುತ್ತದೆ.

ರಾಲ್ಸ್ ರಾಯ್ಸ್ ಡಾನ್ ಅನ್ನು ಪಾರ್ಶ್ವದಿಂದ ನೋಡುವಾಗ, ಕಾರ್ ನ ಸುಸಂಸ್ಕೃತ ನೋಟವು ಕೂಡಲೇ ಕಣ್ಣನ್ನು ಸೆಳೆಯುತ್ತದೆ. ಮೃದುವಾದ ಮೇಲಿನ ಆಕಾರವು ಪೂರ್ಣವಾಗಿ ಸುಸಂಗತವಾಗಿದೆ ಮತ್ತು ಏಕರೂಪವಾಗಿದ್ದು, ಇತರ ಉತ್ಪಾದಕರ ಮೃದು ಟಾಪ್ ನಂತೆ ಒಳಬಾಗಿನ ಅಥವಾ ಚೂಪು ಸೆಟೆತಗಳ ವಿರೂಪವಿಲ್ಲ. ಇದರ ಜೊತೆಗೆ, ಹೊಸ 21" ಪಾಲಿಶ್ ಮಾಡಿದ ಮತ್ತು ಬಣ್ಣ ಹಾಕಲಾದ 21" ಮತ್ತು 20" ಗಾಲಿಗಳು, ಡಾನ್ ಒಂದು ಅತ್ಯುತ್ತಮವಾಗಿ ರೂಪಿಸಲಾದ, ರಾಲ್ಸ್ ರಾಯ್ಸ್ ಐಷಾರಾಮದ ಸಮಕಾಲೀನ ಅಭಿವ್ಯಕ್ತಿ ಎಂದು ನಿರೂಪಿಸುತ್ತದೆ.

ಕಾರಿನ ಹಿಂಬದಿಯಲ್ಲಿ, ಡಾನ್ ನ ಹೆಣ್ಣಿನ ನಿತಂಬದಂತೆ ಉಬ್ಬಿಕೊಂಡಿದ್ದು, ಕೊನೆಯಲ್ಲಿ ಚೂಪಾಗುತ್ತದೆ; ಇದು ಮುಂಚಿನ ರಾಲ್ಸ್ ರಾಯ್ಸ್ ನ ಬೋಟ್ ಟೇಲ್ ನ ಸುಂದರ ವಿನ್ಯಾಸವನ್ನು ಸೂಚಿಸಿದ್ದು, ಇದಕ್ಕೆ ಸ್ಫೂರ್ತಿ ನೀಡಿದ ಆರಂಭಿಕ 20ನೇ ಶತಮಾನದ ಸುಂದರ ವಾಹನದ ಪ್ರಾರಂಭಗಳನ್ನು ಸೂಚಿಸುತ್ತದೆ.

ಮೃದು ಟಾಪ್ ನ ನಿಶ್ಯಬ್ದ ಇಳಿಸುವಿಕೆಯು ರಾಲ್ಸ್ ರಾಯ್ಸ್ ಡಾನ್ ಅನ್ನು ಪರಿವರ್ತಿಸುತ್ತದೆ. ಮಿಡ್ನೈಟ್ ಸಫೈರ್ ಹೊರ ಭಾಗ ಮತ್ತು ಮಾಂಡರಿನ್ ಲೆದರ್ ನ ಆಂತರಿಕದ ನಾಯಕ ನಿರ್ದಿಷ್ಟತೆಯಲ್ಲಿ, ಸೂರ್ಯಕಿರಣವು ಚಿಮ್ಮಿದಾಗ, ರಾತ್ರಿಯು ಹಗಲಾಗಿ, ಒಳಗಿನದನ್ನು ಹೊರತಂದು, ಈ ಸಾಮಾಜಿಕ ತಾಣವನ್ನು ವಿಶಾಲ ವಿಶ್ವದ ಅಗಾಧ ಸಾಧ್ಯತೆಗಳೊಂದಿಗೆ ಬೆರೆಸುತ್ತದೆ.

ತಾರಸಿಯನ್ನು ಇಳಿಸಿದಾಗ, ರಾಲ್ಸ್ ರಾಯ್ಸ್ ಡಾನ್ ನ ಆಕರ್ಷಣೆಯು ಮತ್ತೂ ಹೆಚ್ಚುತ್ತದೆ. ಪಕ್ಕದಿಂದ, ವಿಂಡ್ ಸ್ಕ್ರೀನ್ ನ ಕಡಿದಾದ ಬಾಚುಕೋಲು, ಹಿಂಬದಿ ಕಮಾನುಗಳ ಮೇಲೆ ಹರಿಯುವ ಸ್ವೇಜ್ ರೇಖೆಗಳು ಮತ್ತು ಕಾರಿನುದ್ದಕ್ಕೂ ಏಳುವ ಉನ್ನತ ಬೆಲ್ಟ್ ರೇಖೆಗಳು ಶ್ರಮವಿಲ್ಲದ ವೇಗದ ಅನುಭವವನ್ನು ನೀಡುತ್ತವೆ. ಇದೇ ಬೆಲ್ಟ್ ರೇಖೆಯು, ಕತ್ತನ್ನು ರಕ್ಷಿಸಲು ಜ್ಯಾಕೆಟ್ ನ ಕಾಲರ್ ಅನ್ನು ಎಳೆದಂತೆ, ಹಿಂಬದಿ ಪ್ರಯಾಣಿಕರ ಕ್ಯಾಬಿನ್ ಸುತ್ತಲೂ ಸುತ್ತಲಾಗಿದೆ.

ಕ್ಯಾಬಿನ್ ಸುತ್ತಲೂ ಮಾಡಲಾದ ಸ್ಟೇನ್ ಲೆಸ್ ಸ್ಟೀಲ್ ಟೊಂಕದ ರೇಖೆಯು ಇಳಿಸಿದಾಗ ಮೃದು ಟಾಪ್ ಅನ್ನು ಮುಚ್ಚುವ ಡೆಕ್ ಅನ್ನು ವ್ಯಾಪಿಸುತ್ತದೆ, ಮತ್ತು ಉನ್ನತ ಮಟ್ಟದ ಬ್ರೇಕ್ ದೀಪದೊಂದಿಗೆ ಸಂಯೋಜಿಸಲಾಗಿದೆ. ಈ ಸುಂದರ ಲೋಹದ ಲಕ್ಷಣಗಳು ಸ್ಟೇನ್ ಲೆಸ್ ಸ್ಟೀಲ್ ಬಾಗಿಲ ಕೈಹಿಡಿ,  ಪಾಲಿಶ್ ಮಾಡಿದ ಗಾಲಿಗಳು, ಕಾಣುವ ಎಕ್ಸಾಸ್ಟ್ ಮತ್ತು ಮುಂಬದಿ ಮತ್ತು ಹಿಂಬದಿ ಬಂಪರ್ ಆಭರಣಗಳು ಇವುಗಳೊಂದಿಗೆ ಸಮರಸ ಸಾಧಿಸಿ, ಅಮೂಲ್ಯವಾದ ನೋಟ ಮತ್ತು ಅನುಭವ ನೀಡುತ್ತವೆ.

ಡೆಕ್ ಆಧುನಿಕ ಕೌಶಲ್ಯದ ಅದ್ಭುತ ಕೆಲಸವಾಗಿದೆ. ತೆರೆದ ರಂಧ್ರದ ಕ್ಯನಾಡೆಲ್ ಪ್ಯಾನೆಲ್ ನಲ್ಲಿ ಹಿಂಬದಿ ಕ್ಯಾಬಿನ್ ನ ಅಶ್ವ ಪಾದರಕ್ಷೆಯ ಆಕಾರದಲ್ಲಿ ಆವರಿಸಲಾದ ಇದು, ಗುಡ್ವುಡ್ ನಲ್ಲಿನ ರಾಲ್ಸ್ ರಾಯ್ಸ್ ನ ದಿ ಹೋಂ ನಲ್ಲಿರುವ ಮರಗೆಲಸದ ಕುಶಲಕರ್ಮಿಗಳು, ಮರಗೆಲಸದ ತಂತ್ರಜ್ಞಾನ ಮತ್ತು ತಾಂತ್ರಿಕತೆಯಲ್ಲಿ ಸಾಧಿಸಿರುವ ಅಗಾಧವಾದ ಪ್ರಗತಿಯನ್ನು ಪ್ರದರ್ಶಿಸುತ್ತದೆ.

Rolls-Royce Motor Cars

The Drive, Westhampnett, Chichester, West Sussex PO18 0SH
Telephone +44 (0)1243 384000
www.press.rolls-roycemotorcars.com

ತಮ್ಮ ವೈಯಕ್ತಿಕ ಅಭಿರುಚಿಗಳಿಗೆ ಗ್ರಾಹಕರು ಆರಿಸಿರುವ ಡೆಕ್ ಮೇಲಿನ ಮರವು, ಹಿಂಬದಿ ಆಸನಗಳ ನಡುವೆ ಜಲಪಾತದಲ್ಲಿ ಮತ್ತು ಕ್ಯಾಬಿನ್ ನ ಸುತ್ತಲೂ ಹರಿಯುತ್ತ ಆಂತರಿಕ ಬಾಗಿಲ ಪ್ಯಾನಲ್ ಅನ್ನು ಆವರಿಸುತ್ತದೆ ಮತ್ತು ಡಾನ್ ಅನ್ನು ಪ್ರವೇಶಿಸಲು ಮಾಲಿಕರನ್ನು ಆಕರ್ಷಿಸುತ್ತದೆ.

**ಆಂತರಿಕ ವಿನ್ಯಾಸ**

ಮತ್ತೊಮ್ಮೆ, ರಾಲ್ಸ್ ರಾಯ್ಸ್ ನ ಅನನ್ಯ ಕೋಚ್ ಬಾಗಿಲುಗಳು ಡ್ರಾಪ್ ಹೆಡ್ ಮಾದರಿಯಲ್ಲಿ ತಮ್ಮದೇ ಸ್ವಂತಿಕೆಯನ್ನು ಪ್ರದರ್ಶಿಸಿವೆ. ಕೋಚ್ ಬಾಗಿಲುಗಳು ಆಕರ್ಷಕವಾಗಿ ಮತ್ತು ಸುಂದರವಾಗಿವೆ. ನೀಳವಾದ ಮುಂಬದಿ ರೆಕ್ಕೆಗಳನ್ನು ಮತ್ತು ಆರಾಮವಾದ ವ್ಯಾಫ್ಟ್ ರೇಖೆಗಳಿಗೆ ಪೂರಕವಾಗಿದ್ದು, ನೀಳವಾದ ದೇಹದ ಮತ್ತು ಮುದ್ದಾದ ಕ್ಯಾಬಿನ್ ನ ನೋಟವನ್ನು ನೀಡುತ್ತದೆ.

ಸಾಂಪ್ರದಾಯಿಕ ಸ್ಪೋರ್ಟ್ ಕಾರ್ ನ ನೋಟವನ್ನು ನೆನಪಿಸುವಂತೆ, ಇವು ಹಿಂಬದಿ ಪ್ರಯಾಣಿಕರು ಸುಲಭವಾಗಿ ಪ್ರವೇಶಿಸಲು ಮತ್ತು ಡಾನ್ ನ ಐಷಾರಾಮಿ ತಕ್ಕೆಯಿಂದ ನಿರ್ಗಮಿಸಲು ಸಹಾಯಕವಾಗಿವೆ. ಹಿಂಬದಿ ಪ್ರಯಾಣಿಕರು ಸುಮ್ಮನೆ ರಾಲ್ಸ್ ರಾಯ್ಸ್ ಡಾನ್ ನಿಂದ ನಿರ್ಗಮಿಸುವುದಿಲ್ಲ, ಬದಲಿಗೆ ರೀವಾ ಮೋಟಾರ್ ಲಾಂಚ್ ನಿಂದ ಮೊನಾಕೊ ಅಥವಾ ಲೇಕ್ ಕೊಮೊ ದಲ್ಲಿ ಆಕರ್ಷಕ ಖಾಸಗಿ ಜೆಟ್ಟಿಯನ್ನು ಏರುವಂತೆ ನಿಂತು, ಇಳಿಯುತ್ತಾರೆ.
ಆದರೂ ರಾಲ್ಸ್ ರಾಯ್ಸ್ ನಿಂದ ಯಾರಾದರೂ ನಿರೀಕ್ಷಿಸುವಂತೆ, ಕೋಚ್ ಬಾಗಿಲುಗಳು ಕೇವಲ ಪ್ರವೇಶದ ಮಾತ್ರವಲ್ಲದೆ ಹೆಚ್ಚು ಪ್ರಾಥಮಿಕ ಉದ್ದೇಶವನ್ನೂ ಈಡೇರಿಸುತ್ತವೆ. ಇನ್ನೂ ಮುಖ್ಯವಾಗಿ, ಇದು ದೇಹದ ಒಟ್ಟು ಬಲ ಮತ್ತು ದೃಢತೆಗೆ ಹೆಚ್ಚು ಬೆಂಬಲವಾಗುತ್ತದೆ ಏಕೆಂದರೆ, ಅಡ್ಡಿಯಿಲ್ಲದ ಎ ಪಿಲ್ಲರ್ ನ ರಚನೆಗೆ ಸಹಾಯಕವಾಗಿವೆ.
ಡಾನ್ ಅನ್ನು ಪ್ರವೇಶಿಸುವಾಗ ನಮ್ಮಗೆ ಆಗುವ ಮೊದಲ ಅನುಭವ ಮರ ಮತ್ತು ಲೆದರ್ ನ ಪುಷ್ಕಳವಾದ ಮತ್ತು ಪೌರುಷದ ಮಿಶ್ರಣದ ನಡುವೆ ಸ್ಥಾಪಿಸಲಾದ ನಾಲ್ಕು ಪ್ರತ್ಯೇಕ ಬಕೆಟ್ ಆಸನಗಳು. ಈ ಸ್ಲಿಂಗ್ ಶಾಟ್ ಕಲ್ಪನೆಯು ಚಾಲಕರ ಎ ಪೋಸ್ಟ್ ನಿಂದ ಕಾರ್ ನ ಹಿಂಬದಿಯವರೆಗೂ ಹರಿದು, ಹಿಂಬದಿ ಆಸನಗಳ ಸುತ್ತಲೂ ಹರಿದು, ಕೊನೆಗೆ ಪ್ರಯಾಣಿಕರ ಎ ಪಿಲ್ಲರ್ ಗೆ ಮರಳುತ್ತದೆ.

ಈ ಸ್ಲಿಂಗ್ ಶಾಟ್ ಮಾದರಿಯು ಬಾರ್ಶೆಟ್ಟಾದ ಸ್ಮಾರಕವಾಗಿದ್ದು, ಹಿಂದೆ ಎಳೆದು, ಸಮಚಿತ್ತದಿಂದ, ನಿಂತರುವಾಗಲೂ ಕಾರಿನ ಒಳಗಿರುವವರನ್ನು ದಿಗಂತಕ್ಕೆ ಹಾರಿಸಲು ಸಿದ್ಧವಾದಂತಿದೆ. ಕಾರಿನ ಹೊರಭಾಗದಲ್ಲಿ ಕಾಣುವ ವೇಗವರ್ಧಿತ ಟೆನ್ಶನ್ ಗೆ ಈ ವಿನ್ಯಾಸವು ಪೂರಕವಾಗಿದೆ. ಅಂತರ್ಯವು ಬಾಹ್ಯಕ್ಕೆ ಪೂರಕವಾಗಿದೆ, ಐಶ್ವರ್ಯದ, ಭದ್ರತೆಯ ಮತ್ತು ಅಸ್ತಿತ್ವದ ಪ್ರತೀಕ.

ರಾಲ್ಸ್ ರಾಯ್ಸ್ ನಾಲ್ಕು ಬಹಳ ಪ್ರತ್ಯೇಕವಾದ, ಮುದ್ದಾದ ಆಸನಗಳನ್ನು ನೀಡುತ್ತದೆ. ಈ ವಾಹನವು ಪೂರ್ಣ ನಾಲ್ಕು ಆಸನಗಳದಾಗಿದ್ದು, ನೀವು ಎಲ್ಲಿ ಕೂತರೂ ಆರಾಮದಲ್ಲಿ ರಾಜಿಯಾಗುವುದಿಲ್ಲ. ಕಾರಿನ ಶಕ್ತಿಶಾಲಿ, ಆದರೂ ವಿಲಾಸದ ಉದ್ದೇಶವನ್ನು, ಪೂರ್ಣ ಗಾತ್ರದ ಕೇಂದ್ರೀಯ ಕಾನ್ಸೋಲ್ ನಿಂದ ಪೂರಕವಾಗಿದ್ದು, ಎತ್ತಿ ತೋರಿಸುವಂತೆ ಆಸನಗಳ ವಿನ್ಯಾಸ ಮಾಡಲಾಗಿದೆ. ಆಸನದ ಮೇಲಿನ ಹಿಂಬದಿ ಆಸನದ ಬೆಲ್ಟ್ ಸರಂಜಾಮನ್ನು ಹೊಂದಿದ್ದು, ಪಿಲ್ಲರ್ ರಹಿತ ದೇಹದೊಂದಿಗೆ, ಹರಿವ ರೇಖೆಗಳಲ್ಲಿ ಯಾವುದೇ ತಡೆಯಿಲ್ಲದ ಮರ ಅಥವಾ ಲೆದರ್ ನ ಸ್ಲಿಂಗ್ ಶಾಟ್ ಅನ್ನು ವರ್ಧಿಸಿ, ಒತ್ತಿ ತೋರಿಸುತ್ತದೆ. ಟ್ರೇ ಗಳ ಮೇಲ್ಮೈನಲ್ಲಿನ ಮರವು ಕೇಂದ್ರೀಯ ಕಾನ್ಸೋಲ್ ಗೆ ಹೊಂದಿಕೊಂಡತಿದ್ದು, ಶೆವ್ರಾನ್ ಮಾದರಿಯಲ್ಲಿ ಮುಂದೆ ನೋಡುತ್ತಾ ವೇಗವರ್ಧನೆಯ ಅನುಭವ ನೀಡುತ್ತದೆ.
ಸಲಕರಣೆಗಳ ಪ್ಯಾನೆಲ್ ಅನ್ನೂ ಸೂಕ್ಷ್ಮವಾಗಿ ವರ್ಧಿಸಲಾಗಿದ್ದು, ಡಯಲ್ ಗಳ ಸುತ್ತ ನಯಗೊಳಿಸಿದ ಲೋಹದ ಬಾಸಿಗಗಳನ್ನು ಪ್ರತ್ಯೇಕವಾಗಿ ರಚಿಸಿದ್ದು, ಕೈಯಲ್ಲಿ ಮಾಡಿದ, ಐಷಾರಾಮಿ ಕೈಗಡಿಯಾರದ ನಿಖರ ವಿನ್ಯಾಸವನ್ನು ಆಹ್ವಾನಿಸುತ್ತದೆ; ಪ್ರತಿ ಸಲಕರಣೆಯ ಮಧ್ಯದಲ್ಲಿ ಮ್ಯಾಟ್ ಕ್ರೋಂ ಕೇಂದ್ರಗಳು ತೇಲುತ್ತವೆ. ಇದರ ಜೊತೆಗೆ, ಹೊಸ ಮೋಟಾರ್ ಕಾರ್ ನ ಹೆಸರನ್ನು ತೋರಿಸುವ ಹೊಸ ಗಡಿಯಾರದ ವಿನ್ಯಾಸವನ್ನೂ ಪರಿಚಯಿಸಲಾಗಿದೆ.

**ಇಂಜಿನಿಯರಿಂದ ಮತ್ತು ತಂತ್ರಜ್ಞಾನ**

**ನಿಶ್ಯಬ್ದ ನೃತ್ಯರೂಪಕ**

ಯಾವುದೇ ಸಂದೇಹವಿಲ್ಲದೆ, ಹೊಸ ರಾಲ್ಸ್ ರಾಯ್ಸ್ ಡಾನ್ ದ ಇಂಜಿನಿಯರಿಂಗ್ ಪ್ರಮುಖ ಅಂಶಗಳೆಂದರೆ ಅದರ ಹೊಸ ತಾರಸಿ. ನಿಜವಾದ ರಾಲ್ಸ್ ರಾಯ್ಸ್ ಆಗಿರಲು, ಎಲ್ಲಾ ರಾಲ್ಸ್ ರಾಯ್ಸ್ ಗಳ ಅನುಭವವಾದ ನಿಶ್ಯಬ್ದ ಚಾಲನಾ ಅನುಭವವನ್ನು ಡಾನ್ ನೀಡಬೇಕಿತ್ತು. ಇದೇ ಸಮಯದಲ್ಲಿ, ರಾಲ್ಸ್ ರಾಯ್ಸ್ ಗೆ ಇದ್ದ ಒಂದೇ ಆಯ್ಕೆಯೆಂದರೆ, ಸೌಂದರ್ಯ, ಪ್ರಣಯ ಮತ್ತು ಬ್ರ್ಯಾಂಡ್ ಸೂಕ್ತತೆಗಾಗಿ ಬಟ್ಟೆಯ ತಾರಸಿ ಮಾಡುವುದು. ರಾತ್ರಿಯಲ್ಲಿ ಮಳೆಯಲ್ಲಿ ಕರ್ವರ್ಟಿಬಲ್ ಅನ್ನು ಓಡಿಸುತ್ತಾ, ಹನಿಗಳು ತಾರಸಿಯ ಮೇಲೆ ಬೀಳುವುದನ್ನು ಕೇಳಿಸಿಕೊಳ್ಳುವುದಕ್ಕಿಂತ ಹೆಚ್ಚು ರೋಮಾಂಚಕವಾದದ್ದು ಇನ್ನಿಲ್ಲ. ರಾಲ್ಸ್ ರಾಯ್ಸ್ ನ ಗ್ರಾಹಕರೊಂದಿಗೆ ಮಾತನಾಡುವಾಗ ಅವರಿಗೂ ಹಾಗೆಯೇ ಅನಿಸಿತು.

ಬಟ್ಟೆಯ ತಾರಸಿಯ ವಿನ್ಯಾಸದೊಂದಿಗೆ ಕೆಲಸ ಮಾಡುವಾಗ, ರಾಲ್ಸ್ ರಾಯ್ಸ್ ನ ಇಂಜಿನಿಯರಿಂಗ್ ತಂಡವು ತಾವು ರಾಜಿ ಮಾಡಿಕೊಳ್ಳಲು ಇಚ್ಛಿಸದ ಸವಾಲಿನ ಗುರಿಯನ್ನು ತಮಗಾಗಿಯೇ ಸ್ಥಾಪಿಸಿಕೊಂಡರು – ವಿಶ್ವದಲ್ಲಿ ಅತಿ ನಿಶ್ಯಬ್ದವಾದ ಕನ್ವರ್ಟಿಬಲ್ ಕಾರ್ ಮಾಡುವುದು. ಹೊಸ ತಾರಸಿಯ ಇಂಜಿನಿಯರಿಂಗ್ ನ ಎಲ್ಲಾ ಅಂಶಗಳಿಗೂ ಮತ್ತು ವಿಸ್ತರಣೆಯಿಂದ ಹೊಸ ವಾಹನಕ್ಕೂ ಈ ನಿಶ್ಯಬ್ದದ ಹುಡುಕಾಟ ಅನ್ವಯವಾಗಿತ್ತು.

ಮೊದಲನೇಯದಾಗಿ, ಪ್ರಯಾಣಿಕರ ವಾಹನದ ಚಾಲನೆಯಲ್ಲಿರುವಾಗ ತಾರಸಿ ಮೇಲಿನ, ಮತ್ತು ಕೆಳಗಿನ ಶಬ್ದದ ಅನುಭವವು ಶುದ್ಧವಾಗಿ ರಾಲ್ಸ್ ರಾಯ್ಸ್ ಅನುಭವವಾಗಬೇಕು. ತಾರಸಿಯ ವಿನ್ಯಾಸವು ಆಕರ್ಷಕವಾಗಿ, ಸುಂದರವಾಗಿ ಮತ್ತು ಮೋಹಕವಾಗಿರಬೇಕು ಮತ್ತು ಒಂದು ಕನ್ವರ್ಟಿಬಲ್ ಕಾರ್ ಅನ್ನು ವ್ಯಾಪಿಸುವ ಅತಿದೊಡ್ಡ ಕ್ಯಾನಪಿಯಾಗಿರಬೇಕು.

ಪ್ರಮುಖವಾದ ಅಂಶವೆಂದರೆ, ಕ್ಯಾನಪಿಯು ಹಿಂಬದಿ ಆಸನಗಳನ್ನು ಮತ್ತು ಕಿಟಕಿಯ ಮೇಲನ್ನು ಹೇಗೆ ವ್ಯಾಪಿಸುತ್ತದೆ ಎಂಬುದು; ಇದರಿಂದ ಕಾರಿನ ರೂಫ್ ಲೈನ್ ಅನ್ನು ಕೆಳಗೆ ಇಳಿಸಿ, ಅದಕ್ಕೆ ಅದರ ಕೆಳಗೆ ಜೋಲುವ ನೋಟ ನೀಡುತ್ತದೆ.

ಮತ್ತೊಂದು ಅಂಶವೆಂದರೆ ಹಿಂಬದಿ ಗಾಜಿನ ಸಣ್ಣ ಗಾತ್ರ – ಇದರ ಗಾತ್ರವನ್ನು ಜಾಗರೂಕವಾಗಿ ಗಣಿಸಲಾಗಿದ್ದು, ತಾರಸಿಯು ಮೇಲಿದ್ದಾಗ ಖಾಸಗಿ ಸ್ಥಳದ ಅನುಭವವನ್ನು ವರ್ಧಿಸುತ್ತದೆ.

ತಾರಸಿಯು ಕೇವಲ ಸುಂದರವಾಗಿ ಮತ್ತು ಮೋಹಕವಾಗಿ ಮಾತ್ರವಲ್ಲದೆ, ಕ್ರಿಯೆಯಲ್ಲಿ ಕಾರಿನ ನಿಶ್ಯಬ್ದಕ್ಕೂ ಕೊಡುಗೆ ನೀಡುವಂತೆ ಎರಡು ಪ್ರಮುಖ ತಂತ್ರಗಳನ್ನು ಅಳವಡಿಸೊಕೊಳ್ಳಲಾಗಿದೆ. ನಿಖರವಾಗಿ ಸಪಾಟಾಗಿರುವ ಮೇಲ್ಮೈ, ಜೊತೆಗೆ ನವೀನ ಹೊಲಿದ ಫ್ರೆಂಚ್ ಸೀಂ ತಾರಸಿಯು ಮೇಲಿದ್ದಾಗ ಕಾರ್ ಮೇಲಿನ ಗಾಳಿಯ ಹರಿವು ಯಾವುದೇ ಶ್ಯಬ್ದವನ್ನು ಮಾಡುವುದಿಲ್ಲ. ಒಳಗೆ, ರಾಲ್ಸ್ ರಾಯ್ಸ್ ಡಾನ್ ರಾಲ್ಸ್ ರಾಯ್ಸ್ ವ್ರೈತ್ ನಂತೆಯೇ ನಿಶ್ಯಬ್ದವಾಗಿದೆ – ಕನ್ವರ್ಟಿಬಲ್ ವಾಹನದಲ್ಲಿ ಇದೇ ಮೊತ್ತಮೊದಲನೇಯದು.

ಎರಡೆನೇಯದಾಗಿ – ತಾರಸಿ ಯಂತ್ರದ ವಾಸ್ತವಿಕ ತೆರೆಯುವಿಕೆ ಮತ್ತು ಮುಚ್ಚುವಿಕೆಯು ಸುಂದರವಾಗಿಯೂ, ಅಡ್ಡಬರದಂತೆಯೂ ಇರಬೇಕು. ಈ ತಾರಸಿ ಯಂತ್ರದಿಂದ ಅವರು ಸಾಧಿಸಲು ಇಚ್ಛಿಸಿದ್ದಕ್ಕೆ ಒಂದು ವಿಶೇಷ ಪದವನ್ನು ಸೃಷ್ಟಿಸುವ ಮಟ್ಟಕ್ಕೂ ಇಂಜಿನಿಯರಿಂಗ್ ತಂಡವು ಹೋಯಿತು – ದಿ ಸೈಲೆಂಟ್ ಬ್ಯಾಲೆ/

ಮತ್ತು ಈ ನಿಶ್ಯಬ್ದ ನೃತ್ಯರೂಪಕವನ್ನು ಅವರು ಸಾಧಿಸಿದರು.

ಪೂರ್ಣ ನಿಶ್ಯಬ್ದತೆಯಲ್ಲಿ ಕೇವಲ 22 ಸೆಕೆಂಡ್ ಗಳಲ್ಲಿ ಮತ್ತು 50 ಇಟ/ಾ ವೇಗದಲ್ಲಿ ಕಾರ್ಯಾಚರಣೆ ಮಾಡುವ ಈ ನಿಶ್ಯಬ್ದ ನೃತ್ಯರೂಪಕವು, ಒಳಗಿನ ನಿಶ್ಯಬ್ದತೆ ಮತ್ತು ಏಕಾಂತತೆಯ ಬದಲಿಗೆ ಹೊರ ಪ್ರಪಂಚದ ಶಬ್ದಗಳು, ಬೆಳಕು ಮತ್ತು ಗಂಧವು ಒಳಬಂದಂತೆ ನಮ್ಮ ಇಂದ್ರಿಯೆಗಳನ್ನು ಆವರಿಸುತ್ತವೆ. ಒಂದು ಏರ್ ಲಾಕ್ ಅನ್ನು ತೆರೆಯುತ್ತಿದ್ದಂತೆ, ಡಾನ್ ಹೊರ ಪ್ರಪಂಚಕ್ಕೆ ಮುಚ್ಚಳವನ್ನು ತೆರೆದು, ಕ್ಯಾಬಿನ್ ಮಾಲಿಕರ ಸಾಮಾಜಿಕ ಸ್ಥಳದ ವಿಸ್ತೃತ ಭಾಗವಾಗುತ್ತದೆ.

## ನಿಶ್ಚಿತ ಧ್ವನಿ

ನಿಶ್ಯಬ್ದತೆಯ ಬಗ್ಗೆ ಹೆಚ್ಚು ಚಿಂತಿಸದೆ, ಮಿತ್ರರೊಡನೆ ಸಂಗೀತ ಮತ್ತು ಮನರಂಜನೆಯನ್ನು ಹಂಚಿಸಿಕೊಳ್ಳಲು ಉತ್ಸುಕರಾದವರಿಗೆ, ರಾಲ್ಸ್ ರಾಯ್ಸ್ ಬೆಸ್ಪೋಕ್ ಆಡಿಯೊ ವ್ಯವಸ್ಥೆಯನ್ನು ರಾಲ್ಸ್ ರಾಯ್ಸ್ ಡಾನ್ ನ ಅನನ್ಯವಾದ ವಿನ್ಯಾಸಕ್ಕೆ ವಿಶೇಷವಾಗಿ ರೂಪಿಸಲಾಗಿದೆ. ರಾಲ್ಸ್ ರಾಯ್ಸ್ ಧ್ವನಿ ಇಂಜಿನಿಯರ್ ಗಳಿಂದ ಸೂಕ್ಷ್ಮವಾಗಿ ರೂಪಿಸಲಾದ ಬೆಸ್ಪೋಕ್ ಆಡಿಯೊ, ಎಂದೂ ಮಾಡಲಾದ ಅತಿ ಸಮಗ್ರವಾಗಿ ವಿನ್ಯಾಸಗೊಳಿಸಲಾದ ವಹನ ಹೈ ಫಿ ವ್ಯವಸ್ಥೆಯಾಗಿದೆ. ಮತ್ತು ಡಾನ್ ನ ದ್ವಂದ್ವ ವ್ಯಕ್ತಿತ್ವಕ್ಕೆ ಸರಿಹೊಂದುವಂತೆ ನಿಖರವಾಗಿ ಅಳತೆ ಮಾಡಲಾಗಿದೆ.
ತಾರಸಿಯು ತೆರೆದಿದ್ದರೂ ಅಥವಾ ಮುಚ್ಚಿದ್ದರೂ, ಬೆಸ್ಪೋಕ್ ಆಡಿಯೋ ಅತ್ಯುತ್ತಮವಾದ ಧ್ವನಿ ಸಮತೋಲನ ಮತ್ತು ದಕ್ಷತೆಯನ್ನು ಕಾಯ್ದುಕೊಳ್ಳುತ್ತದೆ. ಕಾರಿನ ಪ್ರಸ್ತಾಪಿತ ಬದಲಾವಣೆಗಳು ಆಡಿಯೊ ವ್ಯವಸ್ಥೆಯ ಮೇಲೆ ಮಾಡಬಹುದಾದ ಪರಿಣಾಮಗಳ ಬಗ್ಗೆ ಕಾರಿನ ವಿನ್ಯಾಸ ಪ್ರಕ್ರಿಯೆಯ ಉದ್ದಕ್ಕೂ ಆಡಿಯೊ ಇಂಜಿನಿಯರ್ ಗಳ ಸಲಹೆ ಕೋರಲಾಗಿತ್ತು – ಇದು ವಾಹನ ಪ್ರಪಂಚದಲ್ಲಿಯೇ ಜಾರಿಯಲ್ಲಿಲ್ಲದ ರೂಢಿಯಾಗಿದೆ.

ಹದಿನಾರು ಪ್ರತ್ಯೇಕವಾಗಿ ರೂಪಿಸಲಾದ ಸ್ಪೀಕರ್ ಗಳು – ಥಿಯೇಟರ್ ಮತ್ತು ಸ್ಟೂಡಿಯೊ ಸೆಟಿಂಗ್ ನೊಂದಿಗೆ, ಶುದ್ಧವಾದ ಅಗಾಧವಾದ ಅನುಭವ ನೀಡಿದವು. ಬೂಟ್ ನಲ್ಲಿ ಇಡಲಾದ ಎರಡು ಬ್ಯಾಸ್ ಸ್ಪೀಕರ್ ಗಳು ಕ್ಯಾಬಿ ಉದ್ದಕ್ಕೂ ನೀಖರವಾಗಿ ಇಡಲಾದ ಏಳು ಟ್ವೀಟರ್ ಗಳಿಗೆ ಪೂರಕವಾಗಿವೆ. ಹೊರಗಿನ ಸಹಜ ಶಬ್ದಗಳನ್ನು ನಿರಂತರವಾಗಿ ಗಮನಿಸಲು ಒಂದು ಸೂಕ್ಷ್ಮವಾದ ಮೈಕ್ರೊಫೋನ್ ಅನ್ನು ಅಳವಡಿಸಲಾಗಿದ್ದು, ಸಮಂಜಸವಾದ ಅನುಭವ ನೀಡಲು ಇದು ಪ್ರಮಾಣ ಮತ್ತು ಟೋನ್ ಗಳನ್ನು ಸೂಕ್ಷ್ಮವಾಗಿ ಬದಲಿಸುತ್ತದೆ. ಹೊರಗಿನ ಪ್ರಭಾವದಿಂದಾಗುವ ಜೋರಾದ ಮತ್ತು ಕೇಳಿಸದ ಪ್ರಮಾಣವನ್ನು ನಿವಾರಿಸಲು ಪ್ರತ್ಯೇಕ ಸ್ಪೀಕರ್ ಗಳಿಗೆ ತರಂಗಾಂತರಂಗ ಮತ್ತು ಫೇಸ್ ತಿದ್ದುಪಡಿಯ ತಂತ್ರಜ್ಞಾನವು ಇದಕ್ಕೆ ಪೂರಕವಾಗಿದೆ.

## ತೆರೆದ ತಾರಸಿ ವಾಹನಕ್ಕೆ ಹೊಸ ಡಾನ್ ಅನ್ನು ರೂಪಿಸುವುದು

ಮೃದು ತಾರಸಿ ಕಾರ್ ಗಳ ಇಂಜಿನಿಯರಿಂಗ್ ನಲ್ಲಿ ರಾಲ್ಸ್ ರಾಯ್ಸ್ ತಂಡವು ಮಾಡಿರುವ ಸಾಟಿಯಿಲ್ಲದ ಪ್ರಗತಿಗಳ ಜೊತೆಗೆ, ಹೊಸ ರಾಲ್ಸ್ ರಾಯ್ಸ್ ಡಾನ್ ಇತರ ಹಲವಾರು ಹೇಳಿ ಮಾಡಿಸಿದ ಇಂಜಿನಿಯರಿಂಗ್ ನಾವೀನ್ಯತೆಗಳನ್ನೂ ಪರಿಚಯಿಸುತ್ತದೆ.

ಯಾವುದೇ ಕನ್ವರ್ಟಿಬಲ್ ನ ವಿನ್ಯಾಸದಲ್ಲಿರುವ ಸವಾಲೆಂದರೆ ಅದರ ಭಾರವನ್ನು ಕಡಿಮೆ ಇಡುವುದರ ಜೊತೆಗೆ ದೇಹದಲ್ಲಿ ಉನ್ನತ ಮಟ್ಟದ ಟಾರ್ಶನ್ ದೃಷತೆಯನ್ನು ಸಾಧಿಸುವುದು. ಸುಮಾರು ಎಲ್ಲಾ ಕನ್ವರ್ಟಿಬಲ್ ಕಾರ್ ಗಳಲ್ಲಿ ಕಂಡುಬರುವ ಓಟದ ತೂಗುವಿಕೆಯನ್ನು ಕಡಿಮೆ ಮಾಡಲು ಟಾರ್ಶನ್ ದೃಷತೆಯು ಅನಿವಾರ್ಯವಾದದ್ದು ಮತ್ತು ಇದು ಕಾರಿನ ಡೈನಮಿಕ್ ಭಂಗಿಯನ್ನು ಸಾಧಿಸಲು ಸಹಾಯಕವಾಗುತ್ತದೆ.

ಇಂಜಿನಿಯರಿಂಗ್ ತಂಡವು ಪೂರ್ಣವಾಗಿ ತೃಪ್ತವಾಗುವವರೆಗೂ ಬಹಳ ಪರೀಕ್ಷೆ ಮತ್ತು ಸಂಶೋಧನೆಗಳನ್ನು ಮಾಡಲಾಯಿತು. ಸಂಭಾವ್ಯ ಸಮಸ್ಯೆಗಳನ್ನು ಗುರುತಿಸಿ, ನಿವಾರಿಸಲು ಕಟುವಾದ ರಸ್ತೆಗಳ ಮೇಲೆ ಸಾವಿರಾರು ಮೈಲಿಗಳ ಚಾಲನೆ ಮಾಡಲಾಯಿತು. ಇದರ ಫಲವೇ ರಾಲ್ಸ್ ರಾಯ್ಸ್ ಡಾನ್ ಅನ್ನು ಇಂದು ಲಭ್ಯವಿರುವ ಅತಿ ದೃಢವಾದ ನಾಲ್ಕು ಆಸನದ ಕನ್ವರ್ಟಿಬಲ್ ಮಾಡುವ ಚಾಸಿ.

ಹೊಸದಾಗಿ ವಿನ್ಯಾಸಗೊಳಿಸಲಾದ ಸಸ್ಪೆಂಶನ್ ವ್ಯವಸ್ಥೆಯು ಈ ತೆರೆದ ತಾರಸಿಯ ಕಾರಿನ, ದೇಹದ ದೃಢತೆ ಮತ್ತು ತೂಕ ಹಂಚಿಕೆಯ ಅಂಶಗಳಲ್ಲಿ ನಿರ್ದಿಷ್ಟ ನಡವಳಿಕೆಯನ್ನು ನಿರ್ವಹಿಸಿ, ಅತ್ಯಂತ ಆರಾಮವಾದ ವಿಹಾರ ಮತ್ತು ನಿರೀಕ್ಷಿತ ರಾಲ್ಸ್ ರಾಯ್ಸ್ 'ಮ್ಯಾಜಿಕ್ ಕಾರ್ಪೆಟ್' ಪ್ರಯಾಣ ನೀಡುತ್ತದೆ.
ಮುಂಬದಿ ಮತ್ತು ಹಿಂಬದಿಯಲ್ಲಿ ಕೆಲವು ಏರೊಡೈನಾಮಿಕ್ ಲಿಫ್ಟ್ ಮತ್ತು ಕಡಿಮೆ ಗುರುತ್ವ ಕೇಂದ್ರ, ಜೊತೆಗೆ ಹೊಸದಾಗಿ ವಿನ್ಯಾಸಗೊಳಿಸಲಾದ ಏರ್ ಸ್ಪ್ರಿಂಗ್ ಮತ್ತು ಸಕ್ರಿಯ ರೋಲ್ ಬಾರ್, ಈ ಅತಿ ಐಷಾರಾಮಿ ಬೋಲೆವಾರ್ದಿಯೆ ಗೆ ಆಶ್ಚರ್ಯಕರ ಚುರುಕಾದ ನಿರ್ವಹಣಾ ಸಾಮರ್ಥ್ಯವನ್ನು ಒದಗಿಸುತ್ತದೆ.

ಪ್ರಜ್ವಲಿಸುವ ಮೋಹಕವಾದ ಹಿಂಬದಿ ಮಗ್ಗಲು, ಘೋಸ್ಟ್ ಗೆ ಹೋಲಿಸಿದಂತೆ, 24 ಟಟು ಹೆಚ್ಚು ಅಗಲವದ ಹಿಂಬದಿ ಟ್ರಾಕ್ ಅನ್ನು ಹೊಂದಿದ್ದು, ಡಾನ್ ಗೆ ಕುಗ್ಗಿದ, ನುಣುಪಾದ ನೋಟ ನೀಡುತ್ತದೆ. ಇದರ ಜೊತೆಗೆ, ಕಾರಿನ ಅಗಲವಾದ ಟೊಂಕವು ಅದಕ್ಕೆ ಮೋಹಕತೆಯನ್ನು ನೀಡುವುದಲ್ಲದೆ, ಅದರ ಅಗಲವಾದ ಭುಜಗಳು ಅದಕ್ಕೆ ಪುರುಷತ್ವದ ಬಲ ಮತ್ತು ಶಕ್ತಿ ನೀಡುತ್ತದೆ; ಇದಕ್ಕೆ ಅದರ 180 mm ಚಿಕ್ಕ ವೀಲ್ ಬೇಸ್ ಸಹಾಯಕವಾಗಿದೆ.

**ರಾಲ್ಸ್ ರಾಯ್ಸ್ ಚಾಲನೆಯ ಅನುಭವದ ಆಂತರ್ಯ**

ಯಾವುದೇ ರಾಲ್ಸ್ ರಾಯ್ಸ್ ಕಾರಿನ ಬಡಿಯುವ ಹೃದಯ ಮತ್ತು ಆತ್ಮವು ಜನಪ್ರಿಯವಾದ ಟ್ವಿನ್ ಟರ್ಬೊ 6.6 ಲಿ V12 ಪವರ್ ಟ್ರೇನ್. 536 bph ಯ ಅಥವಾ 420kW @5,250rpm ಶಕ್ತಿಯನ್ನು ಹೊರಸೂಸುವ ಮತ್ತು 780 Nm ಅಥವಾ 575 lb ft @ 1,500rpmನ ಟಾರ್ಕ್ ಹೊಂದಿದ್ದು, ಡಾನ್ ನ ಚಾಲನಾ ಅನುಭವವು ಅಸಾಧಾರಣವಾಗಿದೆ.

ಡೈನಮಿಕ್ ವೇಗವರ್ಧಕ ಕಾಲುಕೀಲಿಯ ಜೋಡಣೆಯು ಮಧ್ಯಮ ಥ್ರಾಟಲ್ ನಲ್ಲಿ 30ರಷ್ಟು ಹೆಚ್ಚು ಪ್ರತಿಕ್ರಿಯೆ ನೀಡಿದ್ದು, ಇದು ಚಾಲನೆಯ ಅನುಭವವನ್ನು ವರ್ಧಿಸುತ್ತದೆ.

ರಾಲ್ಸ್ ರಾಯ್ಸ್ ನ ವಿಶಿಷ್ಟವಾದ ಸ್ಟೀರಿಂಗ್ ಲಕ್ಷಣಗಳನ್ನು ಡಾನ್ ಕಾಯ್ದುಕೊಂಡಿದ್ದು, ಚಾಲಕರಿಗೆ ಅದ್ಭುತವಾದ ಫೀಡ್ ಬ್ಯಾಕ್ ನೀಡಿ, ವಾಹನದ ಚಾಲನೆ ಶ್ರಮರಹಿತ ಆದರೆ ನಿಖರವಾಗಿರುವಂತೆ ಮಾಡುತ್ತದೆ ಮತ್ತು ಉನ್ನತ ವೇಗದಲ್ಲೂ, ತಾರಸಿ ಮೇಲಿದ್ದರೂ ಅಥವಾ ಕೆಳಗಿದ್ದರೂ, ಉತ್ತಮ ಸುರಕ್ಷತೆಯ ಭಾವನೆ ನೀಡುತ್ತದೆ.

ಇದರ ಫಲವಾಗಿ ಹೊಸ ಡಾನ್ ರಾಲ್ಸ್ ರಾಯ್ಸ್ ನ ಅತಿ ಶಕ್ತಿಶಾಲಿ ಪೂರ್ಣ ನಾಲ್ಕು ಆಸನಗಳ ಡ್ರಾಪ್ ಹೆಡ್ ವಾಹನವಾಗಿದೆ ಮತ್ತು ತನ್ನ ಮುಂದುವರೆದ ಇಂಜಿನಿಯರಿಂಗ್ ನ ಕಾರಣದಿಂದಾಗಿ, ಲಘುವಾಗಿದೆ ಮತ್ತು ಮಾರುಕಟ್ಟೆಯಲ್ಲಿರುವ ಬಹಳಷ್ಟು ರಾಜಿಯಾದ 2+2 ಗಳಿಗಿಂತ ಹೆಚ್ಚು ಇಂಧನ ದಕ್ಷವಾಗಿದೆ.

540 mm (20") ಡಯಾ ಇರುವ ರನ್ಫ್ಲಾಟ್ ಗಾಲಿಗಳು ಹಿಡಿತವನ್ನು ನೀಡುತ್ತವೆ. ಈ ಗಾಲಿಗಳಿಂದ ಡನ್ ಗಾಳಿರಹಿತ ಟೈರ್ ನಲ್ಲಿಯೂ ಯಾವುದೇ ಬದಲಾವಣೆ ಮಾಡದೆ 50mph/80km/h ಗಳ ವೇಗದಲ್ಲಿ ಕನಿಷ್ಟ 100 ಮೈಲಿ/160 ಕಿಮೀ ಅಂತರವನ್ನು ಕ್ರಮಿಸಬಹುದು. ಗಾಳಿರಹಿತ ಟೈರ್ ಇದ್ದರೂ ಉತ್ತಮ ಮಟ್ಟದ ನಿಯಂತ್ರಣವಿರುತ್ತದೆ. ಆಯ್ಕೆಯಲ್ಲಿ 21" ಗಾಲಿಗಳೂ ಲಭ್ಯವಿದ್ದು, ಇದನ್ನು 10 ಸ್ಪೋಕ್ ಗಳ ೦೦ ಮೇಲೆ

ಕೂಡಿಸಲಾಗಿದೆ. ರನ್ಫ್ಲ್ಯಾಟ್ ಟೈರ್ ತಂತ್ರಜ್ಞಾನದ ಅಳವಡಿಕೆಯಿಂದ ಉಳಿಕೆಯ ಗಾಲಿ ಮತ್ತು ಜಾಕ್ ಅನಗತ್ಯವಾಗಿದ್ದು, ಲಗೇಜ್ ಸ್ಥಳದಲ್ಲಿ ಹೆಚ್ಚು ಜಾಗ ಸಿಗುತ್ತದೆ.

**ಶ್ರಮರಹಿತ ಚಾಲನೆಗೆ ವಿವೇಚನಾತ್ಮಕ ತಂತ್ರಜ್ಞಾನ**

ರಾಲ್ಸ್ ರಾಯ್ಸ್ ಕುಟುಂಬದ ಉತ್ತಮ ಕಾರ್ ಗಳಲ್ಲಿ ಸಾಮಾನ್ಯವಾಗಿರುವಂತೆ, ಹೊಸ ಡಾನ್ ವಾಹನ ವಿನ್ಯಾಸ ಮತ್ತು ತಂತ್ರಜ್ಞಾನದ ಮುಂಚೂಣಿಯಲ್ಲಿದೆ. ಡಾನ್ ಚಾಲಕನಿಗೆ ಹಲವಾರು ವಿವೇಕಯುಕ್ತ ತಂತ್ರಜ್ಞಾನಗಳನ್ನು ಒದಗಿಸಿ, ಕಾರ್ ನಲ್ಲಿನ ವಿರಾಮದ ಸಮಯವು ಅತಿ ಐಷಾರಾಮಿ ಅನುಭವವನ್ನಾಗಿಸುತ್ತದೆ. ಇಲ್ಲಿ ಪ್ರಮುಖವಾದದ್ದು ಕಾರ್ ನ ತಂತ್ರಜ್ಞಾನ ಕಾರ್ಯಗಳನ್ನು ವಿವೇಕಯುಕ್ತವಾಗಿ ರೂಪಿಸಿರುವಂಥದ್ದು. ಹಾಗಾಗಿ ಡಾನ್ ನಲ್ಲಿ ಸ್ಪಿರಿಟ್ ಆಫ್ ಎಕ್ಸ್ಟಸಿ ರೋಟರಿ ನಿಯಂತ್ರಕವನ್ನು ಅಳವಡಿಸಲಾಗಿದೆ; ಇದು ಒಂದು ಸ್ವಾಭಾವಿಕವಾದ, ಒಂದು ಸ್ಪರ್ಷದ ಪರಿಹಾರವಾಗಿದ್ದು, ಬಳಕೆದಾರರು ಯಾವುದೇ ಶ್ರಮವಿಲ್ಲದೆ ಮೀಡಿಯಾ ಮತು ಪ್ರಯಾಣದ ಕ್ರಿಯೆಗಳನ್ನು ಬಳಸಬಹುದು.

ಉದಾಹರಣೆಗೆ, ಪ್ರಯಾಣದ ಇನ್ಪುಟ್ ಅಥವಾ ಮೀಡಿಯಾದಲ್ಲಿ ಹುಡುಕಲು ಸಂಕೇತಗಳನ್ನು ಅದರ ಮೇಲ್ಮೈಯಲ್ಲಿ ಬೆರಳಿನಿಂದ ಬರೆಯಬಹುದು; ಇದು ಸ್ಮಾರ್ಟ್‌ಫೋನ್ ಕ್ರಿಯೆಯನ್ನು ಬಿಂಬಿಸುತ್ತದೆ. ಸ್ಟೀರಿಂಗ್ ವೀಲ್ ನಲ್ಲಿ ಅಳವಡಿಸಲಾದ ಏಕಸ್ಪರ್ಶದ ಕಾಲ್ ಬಟನ್ ನಿಂದ ಸರಳವಾದ ಧ್ವನಿಯಾಜ್ಞೆಗಳನ್ನು ನೀಡಬಹುದು. ಈ ಲಕ್ಷಣಗಳಿಂದಾಗಿ ಹೆಚ್ಚುವರಿ ಬಟನ್ ಗಳ ಅಗತ್ಯವಿಲ್ಲ, ಮತ್ತು ಬಳಸಲೂ ಸುಲಭವಾಗಿದೆ. ಉದಾಹರಣೆಗೆ, ಈ ಬಟನ್ ಒತ್ತಿ, ಸಂತ್ ತೋಪೆಜ಼್ ಗೆ ಹೋಗು ಎಂಬ ಆಜ್ಞೆ ನೀಡಿದರೆ, ಕಾರಿನ ಉಪಗ್ರಹ ಯಾನ ವ್ಯವಸ್ಥೆಯು ಅತಿ ಶೀಘ್ರವಾದ ದಾರಿಯನ್ನು ಹುಡುಕುತ್ತದೆ.

ಈ ಸ್ಪಿರಿಟ್ ಆಫ್ ಎಕ್ಸ್ಟಸಿ ರೋಟರಿ ನಿಯಂತ್ರಕವು ಒಂದು ಟಚ್ ಪಾಡ್ ನೀಡಿ (ಆದರೆ ಟಚ್ ಸ್ಕ್ರೀನ್ ನೀಡುವುದಿಲ್ಲ ಏಕೆಂದರೆ ಇದರಲ್ಲಿ ಚಾಲಕ ಮತ್ತು ಪ್ರಯಾಣಿಕರ ಕಣ್ಣಿನ ಮಟ್ಟದಲ್ಲಿ ಅಸಹ್ಯವಾದ ಬೆರಳೆಗುರುತನ್ನು ಬಿಡಬಹುದು), ಬೆರಳಿನಿಂದ ಸಂಕೇತಗಳನ್ನು ಬರೆಯಬಹುದು ಮತ್ತು ಕ್ರೋಂ ಡಯಲ್ ತಿರುಗಿಸಿ ಕ್ರಿಯೆಯ ಮೆನ್ಯುವನ್ನು ನೋಡಬಹುದು ಮತ್ತು ಅದನ್ನು ಒತ್ತಿ ಕ್ರಿಯೆಯನ್ನು ಆರಿಸಬಹುದು.

<u>ಈ ವ್ಯವಸ್ಥೆಗೆ ಆಂಗ್ಲ, ಲ್ಯಾಟಿನ್ ಮತ್ತು ಅರಾಬಿಕ್ ಸಂಕೇತಗಳೂ ಅರ್ಥವಾಗುತ್ತದೆ ಜೊತೆಗೆ ಮಾಂಡರಿನ್ ಕೂಡ ತಿಳಿಯುತ್ತದೆ</u>

ರೋಟರಿ ನಿಯಂತ್ರಕದ ಟಚ್ ಪಾಡ್ ಜಗ್ಗು ಮತ್ತು ಅಮುಕು ಲಕ್ಷಣಗಳು ಸ್ಮಾರ್ಟ್ ಫೋನ್ ನ ಸ್ವಾಭಾವಿಕ ಕ್ರಿಯೆಯನ್ನು ಬಿಂಬಿಸುತ್ತದೆ. ಇದರಿಂದ ಬಳಕೆದಾರರು ಸ್ಕ್ರೀನ್ ಮೇಲೆ ಅಯ್ಕೆಯ ಪ್ರದೇಶಗಳನ್ನು ಖಚಿತವಾಗಿ ಆರಿಸಲು ಅಥವಾ ದೊಡ್ಡದು ಮಾಡಲು ಸಹಾಯಕವಾಗಿದೆ..

ಗಣನೀಯವಾಗಿ ಆಧುನಿಕೀಕೃತಗೊಳಿಸಲಾದ ಮಲ್ಟಿಮೀಡಿಯಾ ಇಂಟರ್ಫೇಸ್ ಮತ್ತು ಪ್ರಯಾನ ವ್ಯವಸ್ಥೆಯ ಮಾಹಿತಿಯನ್ನು ಸುಂದರವಾಗಿ ಹೊಸ 10.25" ಉನ್ನತ ನಿಖರತೆಯ ಸ್ಕ್ರೀನ್ ಮೇಲೆ ತೋರಿಸಲಾಗಿದೆ ಮತ್ತು ದಾರಿಯನ್ನು ಶೀಘ್ರವಾಗಿ ಪತ್ತೆ ಮಾಡಲು ಸಂಸ್ಕರಣೆ ವೇಗವನ್ನು ಹೆಚ್ಚಿಸಲು ಹಾರ್ಡ್ವೇರ್ ಮತ್ತು ಸಾಫ್ಟ್ವೇರ್ ಬದಲಾವಣೆಗಳನ್ನು ಮಾಡಲಾಗಿದೆ.

ಹೊಂದಾಣಿಕೆಗಳನ್ನು ಕಡಿಮೆ ಮಾಡುತ್ತವೆ; ಇದರಿಂದ ನಿರಂತರ ಮೆಲ್ಲಗೆ ಸರಿಯುವುದು, ನಿಲ್ಲುವುದು ಮತ್ತು ಆರಂಭವಾಗುವುದನ್ನು ತಡೆಯಬಹುದು. ಈಗ ಚಾಲಕರು ನಗರದ ಸಂಚಾರದಲ್ಲಿ ವಿಶ್ವಾಸದಿಂದ ಮತ್ತು


The Drive, Westhampnett, Chichester, West Sussex PO18 0SH
Telephone +44 (0)1243 384000
www.press.rolls-roycemotorcars.com

ಆರಾಮವಾಗಿ, ಸ್ಥಿತಿಗಳನ್ನು ಗಮನಿಸಿ, ಸಂಚಾರದಲ್ಲಿ ಬದಲಾವಣೆಗಳಿಗೆ ಪ್ರತಿಕ್ರಿಯಿಸಲು ವ್ಯವಸ್ಥೆಯನ್ನು ಅವಲಂಬಿಸಿ, ಚಲಿಸಿಬಹುದು – ಉದಾಹರಣೆಗೆ ಹೊಸ ರಸ್ತೆಯನ್ನು ಅಥವಾ ಪಕ್ಕದ ರಸ್ತೆಯನ್ನು ಪ್ರವೇಶಿಸುವಾಗ.

ರಾಡಾರ್ ಮತ್ತು ಕ್ಯಾಮೆರಾಗೆ – ಬಂಪರ್ ವಾಲನ್ಸ್ ಮತ್ತು ಮಧ್ಯ ಮೇಲಿನ ವಿಂಡ್ ಸ್ಕ್ರೀನ್ ಅನುಕ್ರಮವಾಗಿ – ಹೊಸ ತಂತ್ರಾಂಶ ಶೀಘ್ರವಾದ ಪ್ರತಿಕ್ರಿಯೆಯನ್ನು ನೀಡುತ್ತದೆ; ಇದರಲ್ಲಿ ತುರ್ತು ಒತ್ತಡದ ನಿರೀಕ್ಷೆಯಲ್ಲಿ ಬ್ರೇಕ್ ಗಳನ್ನು ಶೀಘ್ರವಾಗಿ ಪೂರ್ವ–ಸಜ್ಜುಗೊಳಿಸುವುದು ಸೇರಿದೆ.

ಅತಿ ಕಷ್ಟಕರವಾದ ಸಂದರ್ಭ ಎದುರಾದಾಗ, ಡಾನ್ ಹಿಂಬದಿ ತಲೆ ನಿರೋಧಕಗಳಿಂದ ಮುಚ್ಚಲಾದ ರೋಲ್ ಓವರ್ ರಕ್ಷಣೆಯನ್ನು ಒಂದು ಕ್ಷಣದಲ್ಲಿ ಸಜ್ಜುಗೊಳಿಸುತ್ತದೆ. ಒಂದು ರ್‍ಯಾಶೆಟ್ ವ್ಯವಸ್ಥೆಯು ಅದನ್ನು ಭದ್ರಪಡಿಸುತ್ತದೆ. ಈ ರೋಲ್ ಓವರ್ ರಕ್ಷಣೆ ವ್ಯವಸ್ಥೆಯು ಕಾರಿನ ಪೂರ್ಣ ವಿಂಡ್ ಸ್ಕ್ರೀನ್ ಆವರಣವನ್ನೂ ಸುತ್ತಲೂ ಆವರಿಸುತ್ತದೆ.

**ಉಪಗ್ರಹ ನೆರವಿನ ಪ್ರಸರಣ**

ರಾಲ್ಸ್ ರಾಯ್ಸ್ ಡಾನ್ ನ ಶ್ರಮರಹಿತ ಚೈತನ್ಯವನ್ನು ಉಪಗ್ರಹ ನೆರವಿನ ಪ್ರಸರಣದಿಂದ ವರ್ಧಿಸಲಾಯಿತು; ಈ ತಂತ್ರಜ್ಞಾನವು 2013 ರಲ್ಲಿ ವ್ರೈತ್ ನಲ್ಲಿ ಜಾಗತಿಕ ಆರಂಭ ಕಂಡಿತು.

ಉಪಗ್ರಹ ನೆರವಿನ ಪ್ರಸರಣವು, ಉಋ ದತ್ತಾಂಶ ಬಳಸಿ, ಚಾಲಕನು ಕಾಣುವುದಕ್ಕಿಂತ ಆಚೆಗೆ ನೋಡಲು ಸಹಾಯಕವಾಗಿದೆ; ಇದರಿಂದ ಸ್ಥಳ ಮತ್ತು ಚಾಲನೆಯ ರೀತಿಯನ್ನು ಆಧರಿಸಿ ಮುಂದಿನ ನಡೆಯನ್ನು ಊಹಿಸಬಹುದು.

ಇದು ಈ ಮಾಹಿತಿಯನ್ನು ಬಳಸಿ ಡಾನ್ ನ 8 ವೇಗದ ZF ಗೇರ್ ಬಾಕ್ಸ್ ನಿಂದ ಅತು ಸೂಕ್ತವಾದ ಗೇರ್ ಅನ್ನು ಆರಿಸುತ್ತದೆ ಮತ್ತು ರಾಲ್ಸ್ ರಾಯ್ಸ್ ನ 6.6 ಲೀ ಟ್ವಿನ್ ಟರ್ಬೋ V12 ನಿಂದ ಶಕ್ತಿಯನ್ನು ಸೂಕ್ತವಾಗಿ ಬಳಸಿಕೊಳ್ಳಲು ಸಹಾಯಕವಾಗುತ್ತದೆ. ಇದರಿಂದ ಶ್ರಮರಹಿತ ಮತ್ತು ಸಮಗ್ರವಾದ ಚಲನಾ ಅನುಭವ ಪಡೆಯಬಹುದು.

ಉದಾಹರಣೆಗೆ, ಕಡಿದಾದ ತಿರುವನ್ನು ಸಮೀಪಿಸುವಾಗ, ಚಾಲಕರು ಅದನ್ನು ಕ್ರಮಿಸಲು ಇಚ್ಛಿಸುತ್ತಾರೆಂದು ಕಾರ್ ಊಹಿಸುತ್ತದೆ. ಚಾಲಕರು ವೇಗವರ್ಧಕವನ್ನು ನಿಲ್ಲಿಸಿದಾಗ, ಇದು ಕೆಳಗಿನ ಗೇರ್ ಹಿಡಿದು, ತಿರುವಿನ ಅಂತ್ಯದ ಮೂಲಕ ಹೋಗುವಾಗ ಗರಿಷ್ಟ ಬಲ ಒದಗಿಸುತ್ತದೆ.

ಉಪಗ್ರಹ ನೆರವಿನ ಪ್ರಸರಣವು ಡಾನ್ ನಲ್ಲಿ ಸಾಮಾನ್ಯವಾಗಿದೆ.

**ರಾತ್ರಿಯಿಂದ ಬೆಳಗಿನವರೆಗೆ – ಬೆಳಗಿಸುವ ತಂತ್ರಜ್ಞಾನವು ದಾರಿದೋರುತ್ತದೆ**

LED ಬೆಳಕಿನ ತಂತ್ರಜ್ಞಾನದಲ್ಲಿ ಇತ್ತೀಚೆಗೆ ಆದ ಅಭಿವೃದ್ಧಿಗಳನ್ನು ರಾಲ್ಸ್ ರಾಯ್ಸ್ ಡಾನ್ ನಲ್ಲಿಯೂ ಅಳವಡಿಸಲಾಗಿದೆ. ಈ ಬೆಳಕಿನ ನಿರ್ವಹಣೆಯನ್ನು ಹೊಂದಿಸಬಲ್ಲ ತಂತ್ರಜ್ಞಾನದಿಂದ ವರ್ಧಿಸಲಾಗಿದೆ. ಗಾಲಿಯು ತಿರುಗಿದ ದಿಕ್ಕಿಗೆ ಪರ್ತಿಸ್ಪಂದನೀಯವಾಗಿ ಎಲೆಕ್ಟ್ರಾನಿಕ್ ನಿಯಂತ್ರಣದ ಪ್ರತಿಫಲಕಗಳು ಪ್ರಯಾಣದ ದಿಕ್ಕಿಗೆ ತಿರುಗುತ್ತವೆ. ಇದರಿಂದ ತಿರುಗುವ ಹೆಚ್ಚಿನ ದೂರದವರೆಗೆ ವೀಕ್ಷಣೆ ಸಾಧ್ಯವಾಗುತ್ತದೆ ಮತ್ತು ಬಿಳಿಯಾದ ಉಜ್ವಲ


The Drive, Westhampnett, Chichester, West Sussex PO18 0SH
Telephone +44 (0)1243 384000
www.press.rolls-roycemotorcars.com

ಬೆಳಕು, ಚಾಲಕನ ಆಯಾಸವನ್ನು ಕಡಿಮೆ ಮಾಡುವುದಲ್ಲದೆ, ಕತ್ತಲಿರುವ ರಸ್ತೆಗಳಲ್ಲಿ ಪ್ರಯಾಸವಿಲ್ಲದ ಹಾಗೂ ಸುರಕ್ಷಿತ ಚಾಲನೆಯನ್ನು ಖಚಿತಪಡಿಸುತ್ತವೆ.

ಇದರ ಜೊತೆಗೆ, ಪೂರ್ಣ ಕಿರಣದ ಹೆಡ್ ಲೈಟ್ ಗಳ ಸ್ವಯಂಚಾಲಿತ ಬಗ್ಗುವಿಕೆಯ ಬದಲಿಗೆ ಕ್ರಾಂತಿಕಾರಕ ಹೊಸ ಝುಳಪುರಹಿತ ತಂತ್ರಜ್ಞಾನವನ್ನು ಬಳಸಲಾಗಿದೆ. ಮತ್ತೊಂದು ಕಾರ್ ಹತ್ತಿರಬಂದಾಗ, ಅದರ ಚಾಲಕರಿಗೆ ಕೋರೈಸದಿರಲೆಂದು ಬೆಳಕನ್ನು ತಿರುಗಿಸಲಾಗುತ್ತದೆ. ಹೀಗಾಗಿ ಡಾನ್ ಚಾಲಕರು ನಿರಂತರ ಪೂರ್ಣ ಕಿರಣ ದೃಷ್ಟಿಯ ಸುರಕ್ಷತೆಯ ಲಾಭಗಳನ್ನು ಪಡೆದುಕೊಳ್ಳುತ್ತಾರೆ. ದಿನದ ಓಡುವ ಬಾರ್ ಡಾನ್ ನ ಸಮಕಾಲೀನ ಮುಂಬದಿಯ ಬೆಳಕಿನ ಗ್ರಾಫಿಕ್ ಸುತ್ತಲು ಆವರಿಸಿದ್ದು, ಕಾರ್ ಗೆ ನಿರ್ದಿಷ್ಟ ಗುರುತನ್ನು ನೀಡುವುದರ ಜೊತೆಗೆ ಸುರಕ್ಷತೆಯನ್ನೂ ಹೆಚ್ಚಿಸುತ್ತದೆ.

ಮಾನವ ಮತ್ತು ಪ್ರಾಣಿಗಳ ತಾಪನ ಗುರುತನ್ನು ಪತ್ತೆ ಮಾಡುವ ಮತ್ತು ತಾಪ ಪತ್ತೆ ವ್ಯವಸ್ಥೆಯು ರಾತ್ರಿ ಸಮಯದ ಚಾಲನೆಯ ಸುರಕ್ಷತೆಯನ್ನು ಹೆಚ್ಚಿಸುತ್ತದೆ. ಇದು ಸಂಭಾವ್ಯ ಅಪಾಯದ ಬಗ್ಗೆ ಚಾಲಕನಿಗೆ ಧ್ವನಿಯ ಮೂಲಕ ಎಚ್ಚರಿಕೆ ನೀಡುತ್ತದೆ.

**ತಾಂತ್ರಿಕ ನಿರ್ದಿಷ್ಟತೆಗಳು**

| | |
|---|---|
| **ಆಯಾಮಗಳು** | |
| ವಾಹನದ ಉದ್ದ | 5285mm / 17.34ft |
| ವಾಹನದ ಅಗಲ | 1947mm / 6.39ft |
| ವಾಹನದ ಎತ್ತರ(ಸರಕು ಇಲ್ಲದೆ) | 1502mm / 4.93ft |
| ವೀಲ್ ಬೇಸ್ | 3112mm / 10.21ft |
| ತಿರುವಿನ ವೃತ್ತ | 12.7m / 41.7ft |
| ಬೂಟ್ ವಾಲ್ಯೂಮ್(ಡಿ ಐ ಎನ್) | 244ltr - 295ltr / 8.6 ft3 - 10.4 ft3 |
| **ತೂಕ** | |
| ಹೊರೆ ಇಲ್ಲದೆ(ಡಿ ಐ ಎನ್) | 2560kg / 5644lb |
| **ಇಂಜಿನ್** | |
| ಇಂಜಿನ್/ಸಿಲಿಂಡ/ವಾಲ್ವ್ | V / 12 / 48 |
| ಇಂಧನ ನಿರ್ವಹಣೆ | Direct injection |
| ಶಕ್ತಿಯ ಔಟ್ ಪುಟ್ @ ಇಂಜಿನ್ ವೇಗ | 563bhp / 420kW / 570PS @ 5250rpm |
| ಗರಿಷ್ಟ ಟಾರ್ಕ್ @ ಇಂಜಿನ್ ,ಠಜಜ | 780Nm / 575lb ft @ 1500rpm |
| ಇಂಧನ ಮಾದರಿ | 10:1 / Premium unleaded[1] |
| **ಕಾರ್ಯಕ್ಷಮತೆ** | |
| ಗರಿಷ್ಟ ವೇಗ | 250kmh / 155mph (governed) |
| ಆಕ್ಸಿಲರೇಷನ್ 0 - 100km/h | 4.9sec[2] |
| **ಇಂಧನ ಬಳಕೆ** | |
| ನಗರ | 21.4ltr / 100km / 13.2mpg (Imp.) |
| ಹೆಚ್ಚುವರಿ ನಗರ | 9.8ltr / 100km / 28.8mpg (Imp.) |
| ಸಂಚಿತ ಬಳಕೆ/ಶ್ರೇಣಿ/ವ್ಯಾಪ್ತಿ | 14.2ltr / 100km / 19.9mpg (Imp.) |
| $CO_2$ ಉತ್ಸರ್ಜನೆ | 330g/km |

ಈ ಅಂಕಿ–ಅಂಶಗಳು ಅಂತಿಮ ತಾರ್ಕಣೆಗೆ ಒಳಪಟ್ಟಿವೆ

ಮುಗಿಯಿತು

**ಹೆಚ್ಚಿನ ಮಾಹಿತಿ**

ನಮ್ಮ ಮಾಧ್ಯಮ ಜಾಲತಾಣವಾದ ಪ್ರೆಸ್ ಕ್ಲಬ್ ನಲ್ಲಿ ನಮ್ಮ ಎಲ್ಲಾ ಮಾಧ್ಯಮ ಪ್ರಕಟಣೆಗಳನ್ನು, ಮತ್ತು ಮಾಧ್ಯಮ ಕಿಟ್ ಮತ್ತು ಅಗಾಧ ಆಯ್ಕೆಯ ಉನ್ನತ ಪೃಥಕ್ಕರಣದ, ಡೌನ್ ಲೋಡ್ ಮಾಡಬಹುದಾದ ಚಿತ್ರಗಳನ್ನು ಮತ್ತು ವೀಡಿಯೊ ಫೂಟೇಜ್ ಗಳನ್ನು ಪಡೆಯಬಹುದು. ಟ್ವಿಟ್ಟರ್ ನಲ್ಲಿ ರಾಲ್ಸ್ ರಾಯ್ಸ್ ಮೋಟಾರ್ ಕಾರ್ಸ್ ನ ಸಂವಹನ ತಂಡವನ್ನೂ ಭೇಟಿಯಾಗಬಹುದು.

**ಮಾಧ್ಯಮ ಸಂಪರ್ಕಗಳು:**

**ಗುಡ್‌ವುಡ್**

- **ಜಾಗತಿಕ ಸಂವಹನದ ನಿರ್ದೇಶಕರು**

ರಿಚರ್ಡ್ ಕಾರ್ಟರ್ +44 (೦) 1243 384೦6೦ richard.carter@rolls-roycemotorcars.com

**ಜಾಗತಿಕ ಸಾಂಸ್ಥಿಕ ಸಂವಹನ**

ಆಂಡ್ರ್ಯೂ ಬಾಲ್ +44 (೦) 1243 384೦64 andrew.ball@rolls-roycemotorcars.com

**ಜಾಗತಿಕ ಉತ್ಪನ್ನ ಸಂವಹನ**

ಆಂಡ್ರ್ಯೂ ಬಾಯ್ಲ್ +44 (೦) 1243 384೦62 andrew.boyle@rolls-roycemotorcars.com

**ಜಾಗತಿಕ ಜೀವನಶೈಲಿ ಸಂವಹನ**

ಎಮ್ಮಾ ರಿಕ್ಕೆಟ್ +44 (೦) 1243 384೦61 emma.rickett@rolls-roycemotorcars.com

**ಪ್ರಾದೇಶಿಕ**

**ಏಶಿಯಾ ಪ್ಯಾಸಿಫಿಕ್ – ಉತ್ತರ**

ರೋಸ್ಮೇರಿ ಮಿಶೆಲ್ +81 (೦) 3 6259 8888 rosemary.mitchell@rolls-roycemotorcars.com

**ಏಶಿಯಾ ಪೆಸಿಫಿಕ್ – ದಕ್ಷಿಣ**

ರಾಣಿ ರಾಮಯ್ಯ +65 6838 9753 rani.ramaya@rolls-roycemotorcars.com

ಹಾಲ್ ಸೆರುಡಿನ್ +65 6838 9675 hal.serudin@rolls-roycemotorcars.com

**ಚೀನಾ**

- ಅನ್ನಾ ಕ್ಸು + 86 1084558೦37 anna.xu@rolls-roycemotorcars.com

ಐರೋಪ್ಯ – ಪೂರ್ವ

ಫ್ರಾಂಕ್ ಟೀಮನ್ +49 (೦) 89 382 29581 frank.tiemann@rolls-roycemotorcars.com

ಐರೋಪ್ಯ – ಪಶ್ಚಿಮ

ರುತ್ ಹಕ್ಲೆನ್ಬ್ರಾಯಿಕ್ +49 (೦) 89 382 6೦064 ruth.hucklenbroich@rolls-roycemotorcars.com

ಮಧ್ಯಪೂರ್ವ, ಆಫ್ರಿಕಾ

ಮಧ್ಯ ಏಶಿಯಾ ಮತ್ತು ದಕ್ಷಿಣ ಅಮೆರಿಕಾ

ಜಮಾಲ್ ಆಲ್ ಮವೆದ್ +971 561717883 jamal.almawed@rolls-roycemotorcars.com

ಉತ್ತರ ಅಮೆರಿಕಾ
ಗೆರ್ರಿ ಸ್ಪಾಹ್ನ್ +1 2೦1 93೦ 83೦8 gerry.spahn@rolls-roycemotorcarsna.com

ಗಬ ಮತ್ತು ಸ್ಕ್ಯಾಂಡಿನೇವಿಯಾ
ಜೇಮ್ಸ್ ವಾರ್ರೆನ್ +44 (೦)1243 384578 james.i.warren@rolls-roycemotorcars.com